# ಒಂದು ಗಂಟೆಯ ಕಾಲ

# ಯೇಸುವಿನ ಜೊತೆ

## ದೇಶಗಳಿಗಾಗಿ ಪ್ರಾರ್ಥನೆ



"... ಹೀಗೋ? ಒಂದು ಗಳಿಗೆಯಾದರೂ ನನ್ನ
ಸಂಗಡ ಎಚ್ಚರವಾಗಿರಲಾರಿರಾ? " ಮತ್ತಾಯ26:40

# ನಿಮ್ಮ ಸಹೋದರನಿಂದ...



ಪ್ರಿಯರಾದವರೆ, ಯೇಸು ಕ್ರಿಸ್ತನ ಮಧುರವಾದ ನಾಮದಲ್ಲಿ ನಿಮಗೆ ನನ್ನ ಪ್ರೀತಿಯ ವಂದನೆಗಳು.

ದೇಶದ ಉಜ್ಜೀವನಕ್ಕಾಗಿ ಆಶೀರ್ವಾದಕ್ಕಾಗಿ ಪ್ರಾರ್ಥಿಸಲು ಅರ್ಪಿಸಿರುವ ನಿಮಗಾಗಿ ದೇವರಲ್ಲಿ ಸ್ತೋತ್ರ ಸಲ್ಲಿಸುತ್ತೇನೆ.

**ಅಂತ್ಯಕಾಲದಲ್ಲಿ ಬರಲಿರುವ ಪ್ರಪಂಚವನ್ನು ವ್ಯಾಪಿಸುವಂತಹ ಉಜ್ಜೀವನ ಭಾರತದಿಂದಲೇ ಹೊರಡಲಿಕ್ಕಿದೆ.** ಅತಿ ಬೇಗನೆ ನಾವು ಅದನ್ನು ಅನುಭವಿಸಲಿಕ್ಕಿದ್ದೇವೆ, ಆದರೆ ಅದಕ್ಕಿಂತ ಮುಂಚಿತವಾಗಿ ದೇವರು ದೇಶವನ್ನು, ಸಭೆಗಳನ್ನು ಶುದ್ಧಿಕರಿಸುತ್ತಿದ್ದಾರೆ.

**ದೇವರ ದಂಡನೆ ದೇಶದಲ್ಲಿ ನೆರವೇರುವ ಕಾಲ, ಪ್ರಾರ್ಥಿಸುವವರ ನಿಮಿತ್ತವೆ ಅದನ್ನು ಕಡಿಮೆ ಮಾಡಲು ಸಾಧ್ಯ.** ಅಷ್ಟು ಮಾತ್ರವಲ್ಲಾ ಭಾರತದಲ್ಲಿ ದೇವರು ಮಾಡಲಿಕ್ಕಿರುವ ಮಹಿಮೆಯಾದ ಉಜ್ಜೀವನ ಯೋಜನೆಗಳು ಸೈತಾನನಿಗೂ ತಿಳಿದಿದೆ.

ಅವನಿಗೆ ಕೊಡಲ್ಪಟ್ಟ ದಿನಗಳು ಮುಗಿಯಲಿಕ್ಕಿದೆ! ಆದ್ದರಿಂದ ತನಗೆ ಸ್ವಲ್ಪಕಾಲ ಮಾತ್ರ ಇದೆ ಎಂದು ಅರಿತು, ಶತ್ರುವಾದವನು ದೇಶದಲ್ಲಿ ದೇವರ ಕೋಪಾಗ್ನಿಯೂ ಪ್ರಕಟವಾಗಲು ಕಾರಣವಾದ ಪಾಪಗಳನ್ನು ಅದಿಕರಿಸಲು ಪಾತಾಳದ ಆತ್ಮಗಳನ್ನು ಬಿಚ್ಚಿಟ್ಟಿದ್ದಾನೆ.

**ಯಾವ ಕಾಲದಲ್ಲೂ ಇಲ್ಲದಷ್ಟು ದೇಶದಲ್ಲಿ ಪಾಪಗಳು ಹೆಚ್ಚಿವೆ. ಇವುಗಳನ್ನು ನಮ್ಮ ಪ್ರಾರ್ಥನೆಯಿಂದ ಮಾತ್ರವೆ ತಡೆಹಿಡಿಯಲು ಸಾಧ್ಯ.** ಆದ್ದರಿಂದ ಪ್ರತಿದಿನವು ಮುಂಜಾನೆ ಕನಿಷ್ಠ ಪಕ್ಷ ಒಂದು ಗಂಟೆಯಾದರು ದೇವರ ಸಮ್ಮುಖವನ್ನು ಹುಡುಕಿರಿ, ದೇಶಕ್ಕಾಗಿ ಪ್ರಾರ್ಥಿಸಿರಿ.

**ನಿಮ್ಮ ಪ್ರಾರ್ಥನೆಗೆ ಸಹಾಯವಾಗುವಂತೆ ಈ ಪ್ರಾರ್ಥನಾ ಮನವಿಗಳನ್ನು ಉಪಯೋಗಿಸಿರಿ.** ಎಲ್ಲಾ ಪ್ರಾರ್ಥನಾ ಮನವಿಗಳನ್ನು ಒಂದೇ ದಿನದಲ್ಲಿ ಪ್ರಾರ್ಥಿಸಲೂ ಸಾಧ್ಯವಿಲ್ಲ. ದೇವರಾತ್ಮರು ಪ್ರೇರೆಪಿಸುವ ಹಾಗೆ ಪ್ರಾರ್ಥಿಸಿರಿ. ಒಂದು ಪ್ರಾರ್ಥನಾ ಮನವಿಗಾಗಿ ನೀವು ನಿಮ್ಮ ಮನಸ್ಸನ್ನು ಏಕಾಗ್ರತೆಯಿಂದ ಪ್ರಾರ್ಥಿಸಲು ಪ್ರಾರಂಭಿಸುವಾಗಲೇ,ನಮ್ಮ ಕರ್ತನಾಗಿರುವ ದೇವರು ನಿಮ್ಮ ಜೊತೆಯಲ್ಲಿ ಕೂಡಿ ಎಡಬಿಡದೆ ವಿಜ್ಞಾಪಿಸುವರು.ನಿಮ್ಮ ಪ್ರಾರ್ಥನಾ ಸಮಯವೂ ಮಹಿಮೆಯಾಗಿರುವುದು.

ಸಮಯವಿರುವಾಗಲೆಲ್ಲಾ ಈ ಪ್ರಾರ್ಥನಾ ಕರ ಪುಸ್ತಕವನ್ನು ಉಪಯೋಗಿಸಿರಿ. ಪ್ರಾರ್ಥಿಸುವ ಕಾರ್ಯಗಳಿಗಾಗಿ ಉತ್ತರವನ್ನು ಸುದ್ಧಿವಾಹಿನಿಗಳಲ್ಲಾದರೂ ಅಥವಾ ದಿನಪತ್ರಿಕೆಗಳಲ್ಲಾದರೂ ಅಪೇಕ್ಷಿಸಿರಿ. ಖಂಡಿತವಾಗಿ ಉತ್ತರವನ್ನು ಪಡೆದುಕೊಳ್ಳುವಿರಿ.

ದೇವಜನರಾಗಿರುವ ನಾವು ವೈಯಕ್ತಿಕವಾಗಿಯೂ, ಕುಟುಂಬವಾಗಿಯೂ, ಸಭೆಯಾಗಿಯೂ ಕೂಡಿ ಪ್ರಾರ್ಥಿಸುವಾಗ ದೇಶದಲ್ಲಿ ಕೆಡುಕು ನೀಗಿಸಲ್ಪಟ್ಟು, ಒಳಿತು ಬೆಳೆಯುವುದನ್ನು ನಾವು ಕಾಣಬಹುದು. **ಪ್ರಾರಂಭದಲ್ಲಿ ಉತ್ಸಹದಿಂದ ಪ್ರಾರ್ಥನೆಮಾಡಿ ನಂತರ ಅಸಡ್ಡೆಯಾಗಿರಬೇಡಿರಿ.**

ಆದಿ ಸಭೆಗಳ ವಿಶ್ವಾಸಿಗಳ ಹಾಗೆ ಪ್ರಾರ್ಥನೆಯಲ್ಲಿ ಧೃಡವಾಗಿ ಇರೋಣ! ಉಜ್ಜೀನವನ್ನು ನೋಡೋಣ! **ನಿಮಗಾಗಿ ನಾವು ಪ್ರಾರ್ಥಿಸುತ್ತಿದ್ದೇವೆ! ನನಗಾಗಿಯೂ "ಯೇಸು ಬಿಡಿಸುತ್ತಾನೆ" ಸೇವೆಗಳಿಗಾಗಿ ನೀವು ಪ್ರಾರ್ಥಿಸಿರಿ.**

**ದೇವರ ಕೃಪೆಯೂ ನಿಮ್ಮೊಂದಿಗಿರಲಿ**

ನಿಮ್ಮ ಸಹೋದರ

**ಮೋಹನ್ ಸಿ ಲಾಜರಸ್**

# ಒಂದು ಗಂಟೆಯ ಕಾಲ ಪ್ರಾರ್ಥಿಸುವುದು ಹೇಗೆ?



**15 ನಿಮಿಷಗಳು!**

ಕೆಲವೊಂದು ಹಾಡುಗಳನ್ನು ಹಾಡಿರಿ, ದೇವರನ್ನು ಸ್ತುತಿಸಿರಿ! ಸ್ತೋತ್ರ ಸಲ್ಲಿಸಿರಿ!

**ತಂದೆಯಾಗಿರುವ ದೇವರು!**

ದೇವರ ನಾಮಗಳನ್ನು, ಅವರು ಮಾಡಿರುವ ಅದ್ಭುತಗಳನ್ನು ಹೇಳಿ ಆತನನ್ನು ಸ್ತುತಿಸಿರಿ!

**ಕುಮಾರನಾಗಿರುವ ಕ್ರಿಸ್ತನು!**

ಯೇಸು ಕ್ರಿಸ್ತನ ನಾಮಗಳನ್ನು ಹೇಳಿ, ಅವರು ಮಾಡುತ್ತಿರುವ ಅದ್ಭುತಗಳನ್ನು ಹೇಳಿ ಆತನನ್ನು ಸ್ತುತಿಸಿರಿ.

**ಪರಿಶುದ್ಧಾತ್ಮನು!**

ಪರಿಶುದ್ಧಾತ್ಮನ ನಾಮಗಳನ್ನು, ಆತನ ಕ್ರಿಯೆಗಳನ್ನು ಹೇಳಿ ಆತನನ್ನು ಸ್ತುತಿಸಿರಿ! ತ್ರೈಯೇಕ ದೇವರಾಗಿರುವ ಕರ್ತನು ನಿಮ್ಮ ಜೀವನದಲ್ಲಿ ಮಾಡಿರುವ ಒಳಿತುಗಳನ್ನು ಸ್ಮರಿಸಿ ಆತನನ್ನು ಸ್ತುತಿಸಿರಿ.

**15 ನಿಮಿಷಗಳು!**

ಸತ್ಯವೇದವನ್ನು ಧ್ಯಾನಿಸಿರಿ! ಮೊಣಕಾಲಿನಲ್ಲಿ ನಿಂತು ಸತ್ಯವೇದವನ್ನು ಓದಿರಿ. ಕರ್ತನು ನಿಮ್ಮ ಸಂಗಡ ಮಾತಾಡುವನು, ವಾಕ್ಯಕ್ಕೆ ತಕ್ಕ ಹಾಗೆ ವಿದೇಯತ್ವಕ್ಕೆ ಒಪ್ಪಿಸಿ ಕೊಟ್ಟು ಪ್ರಾರ್ಥಿಸಿರಿ. ವಾಗ್ದಾನವನ್ನು ಸ್ವತಂತ್ರಿಸಿಕೊಂಡು ಪ್ರಾರ್ಥಿಸಿರಿ. ಸಾಧ್ಯವಾದರೆ ದಿನವೂ ಒಂದು ಸತ್ಯವೇದ ವಾಕ್ಯವನ್ನು ಕಂಠಪಾಠ ಮಾಡಿರಿ.

**25 ನಿಮಿಷಗಳು!**

ಕೊಡಲ್ಪಟ್ಟಿರುವ ಪ್ರಾರ್ಥನಾ ಮನವಿಗಳಿಗಾಗಿ ದೇವರ ಸಮ್ಮುಖದಲ್ಲಿ ಹೇಳಿ ಪ್ರಾರ್ಥಿಸಿರಿ. ದೇವರಾತ್ಮನು ಪ್ರೇರೇಪಿಸುವ ಹಾಗೆ ಪ್ರತಿದಿನವೂ ಪ್ರಾರ್ಥಿಸಿರಿ.

**5 ನಿಮಿಷಗಳು!**

ನಿಮ್ಮ ವೈಯಕ್ತಿಕವಾದ ಮತ್ತು ಕುಟುಂಬದ ಕಾರ್ಯಗಳನ್ನು ದೇವರಿಗೆ ತಿಳಿಸಿ ಪ್ರಾರ್ಥಿಸಿರಿ, ನಿಮ್ಮ ಪ್ರಾರ್ಥನೆ ಕೇಳಲ್ಪಟ್ಟಿದ್ದಕ್ಕಾಗಿ ದೇವರಿಗೆ ಸ್ತೋತ್ರ ಸಲ್ಲಿಸಿ ಪ್ರಾರ್ಥಿಸಿರಿ.



# ಕರ್ತನಿಗೆ ಸ್ತೋತ್ರ ಮಾಡಿ ಸ್ತುತಿಸಿರಿ

1. ಕರ್ತನಾಗಿರುವ ದೇವರು ಒಬ್ಬನೇ ನಿತ್ಯಾನಂದವುಳ್ಳ,ಏಕ ಚಕ್ರಧಿಪತಿಯೂ,ರಾಜಧಿ ರಾಜನು,ಕರ್ತಾದಿ ಕರ್ತನು, ಒಬ್ಬನು ಸೇರಲಾರದ ಬೆಳಕಿನಲ್ಲಿ ವಾಸಿಸುವವನು, ಮನುಷ್ಯರಲ್ಲಿ ಇದುವರಗೂ ಒಬ್ಬನು ನೋಡದೆ ಇರುವವನು, ಇನ್ನೂ ಎಷ್ಟೂ ಮಾತ್ರಕ್ಕೂ ಕಾಣಲ್ಪಡದೆ ಇರುವವನಾಗಿರುವ ಆತನಿಗೆ ಸರ್ವ ಘನವೂ, **ಮಹಿಮೆಯೂ ಸಲ್ಲಿಸಿ ಸ್ತೋತ್ರ ಹೇಳಿರಿ!**

2. ಕರ್ತನಾಗಿರುವ ಯೇಸು ಕ್ರಿಸ್ತನು ನಮ್ಮ ಭಾರತ ದೇಶವನ್ನು ಪ್ರೀತಿಸುವುದರಿಂದ, ಭಾರತದಲ್ಲಿರುವ ಒಬ್ಬೊಬ್ಬರಿಗಾಗಯೂ ಅವರ ಬೆಲೆಯುಳ್ಳ ರಕ್ತ ಸುರಿಸಲ್ಪಟ್ಟದಕ್ಕಾಗಿ, ಎಲ್ಲಾ ಮನುಷ್ಯರು ರಕ್ಷಣೆ ಹೊಂದಲು, ಅವರು ಚಿತ್ತವುಳ್ಳವನಾಗಿ ಇರುವುದರಿಂದ **ಅವರನ್ನು ಸ್ತುತಿಸೋಣ!**

3. ಭಾರತ ದೇಶದ ಹೆಸರು ಸತ್ಯವೇದದಲ್ಲಿ ಬರೆಯಲ್ಪಟ್ಟಿರುವುದಕ್ಕಾಗಿ, 2000 ವರ್ಷಗಳ ಮುಂಚಿತವಾಗಿ ಕರ್ತನಾದ ಯೇಸು ಕ್ರಿಸ್ತನು ತಮ್ಮ ಅಪೋಸ್ತಲನಾದ ತೋಮನನ್ನು ಭಾರತಕ್ಕೆ ಕಳುಹಿಸಿ ಆತನ ಮೂಲಕವಾಗಿ ಅನೇಕ ಸಭೆಗಳು ಸ್ಥಾಪಿಸಲ್ಪಟ್ಟದ್ದಕ್ಕಾಗಿ, ದೇಶದಲ್ಲಿ ಉಜ್ಜೀವನವನ್ನು ಕಟ್ಟಳೆ ಇಟ್ಟದ್ದಕ್ಕಾಗಿ **ಕರ್ತನನ್ನು ಸ್ತುತಿಸೋಣ!**

4. ಭಾರತ ದೇಶದ ಮೇಲೆ ಕರ್ತನಾಗಿರುವ ಯೇಸು ಕ್ರಿಸ್ತನು ಇಟ್ಟಿರುವ ಪ್ರೀತಿಯ ನಿಮ್ಮಿತ ಅನೇಕ ಮಿಷಿನರಿಗಳನ್ನು ಗೋಧಿ ಕಾಳುಗಳಾಗಿ ಮಡಿಯಲು ಭಾರತ ದೇಶಕ್ಕೆ ಕಳುಹಿಸಿದ್ದಕ್ಕಾಗಿ, ಅವರ ಮುಖಾಂತರವಾಗಿ "ಯೇಸು" ಎನ್ನುವ ರಕ್ಷಕನನ್ನು ಈ ದೇಶವು ತಿಳಿದುಕೊಳ್ಳುವಂತೆ ಮಾಡಿದ **ಕರ್ತನನ್ನು ಸ್ತುತಿಸೋಣ**

5. ಭಾರತದಲ್ಲಿ ಕರ್ತನು ಎಬ್ಬಿಸಿರುವ ಎಲ್ಲಾ ಸಭೆಗಳಿಗಾಗಿ ಐದು ವಿದವಾದ ದೇವಸೇವಕರಿಗಾಗಿ (ಅಪೊಸ್ತಲರಿಗಾಗಿ, ಪ್ರವಾಧಿಗಳಿಗಾಗಿ, ಸುವಾರ್ತಿಕರಿಗಾಗಿ, ಸಭಾ ಪಾಲಕರಿಗಾಗಿ, ಸಭೆಯ ಭೋದಕರಿಗಾಗಿ) **ಕರ್ತನನ್ನು ಸ್ತತಿಸೋಣ!**

6. ಅಂತ್ಯಕಾಲ ಮಹಿಮೆಯ ಉಜ್ಜೀವನ ಭಾರತದಿಂದ ಪ್ರರಂಭವಾಗಿ ಲೋಕವೆಲ್ಲಾ ವ್ಯಾಪಿಸಬೇಕೆಂದು.ದೇವರ ಚಿತ್ತವಾಗಿ ಇರುವುದಕ್ಕಾಗಿ ಅದಕ್ಕಾದ ಕೆಲಸ ಸಮಯವು ಬಂದದ್ದಕ್ಕಾಗಿ, ಆದಕ್ಕಾದ ಸಿದ್ಧತೆಯ ಕೆಲಸಗಳು ಪ್ರರಂಭಾವಾಗಿರುವುದಕ್ಕಾಗಿ **ಕರ್ತನನ್ನು ಸ್ತುತಿಸೋಣ!**

7. ಸಕಲ ಜಲರಾಶಿಗಳಿಗಾಗಿ, ಭೂಮಿ ವಿಸ್ತರಣೆಗಾಗಿ ಎಲ್ಲಾ ಸಮೃಧಿಕರವಾಗಿರುವ ದೇಶದ ಆಶೀರ್ವಾದಕ್ಕಾಗಿ, ಭಾರತ ದೇಶವನ್ನು ದೇವರು ಆಶೀರ್ವಾದವಾಗಿ ಇಟ್ಟಿರುವುದಕ್ಕೋಸ್ಕರ **ಕರ್ತನನ್ನು ಸ್ತುತಿಸೋಣ**

8. ಭಾರತವನ್ನು ಕರ್ತನು ಒಳ್ಳೆಯ ಪ್ರಜಾಪ್ರಭುತ್ವ ದೇಶವಾಗಿಯು ಜೀವವುಳ್ಳ ದೇವರನ್ನು ಸ್ವತಂತ್ರವಾಗಿ ಆರಾಧಿಸುವುದಕ್ಕು, ಆತನ ನಾಮವನ್ನು ಪ್ರಸಿದ್ಧಿಪಡಿಸುವುದಕ್ಕು ಒಳ್ಳೆಯ ದೇಶವಾಗಿ ಇಟ್ಟಿರುವುದಕ್ಕೋಸ್ಕರ **ಕರ್ತನನ್ನು ಸ್ತುತಿಸೋಣ**

9. ಭಾರತ ದೇಶದ ಸಮಾಧಾನವನ್ನು, ಆಶೀರ್ವಾದವನ್ನು ಕೆಡಿಸಲು, ಶತ್ರುವಾದ ಸೈತಾನನು ಎಷ್ಟೋ ತಂತ್ರವಾದ ಕಾರ್ಯವನ್ನು ಮಾಡುತ್ತಾ ಬರುತ್ತಿರುವುದರಿಂದ, ಕರ್ತನು ಆತನ ಯೋಜನೆಗಳನ್ನು ದುಷ್ಠಕಾರ್ಯಗಳನ್ನು ಎಲ್ಲವನ್ನು ನಮಗೆ ಪ್ರಕಟಪಡಿಸಿ ಅದಕ್ಕಾಗಿ ನಮ್ಮನ್ನು ಪ್ರಾರ್ಥಿಸುವಂತೆ ಮಾಡಿ, ಆ ಕಾರ್ಯಗಳ ಎಲ್ಲವುಗಳ ಮೇಲೆಯು ನಮಗೆ ಜಯಕೊಟ್ಟ **ಕರ್ತನನ್ನು ಸ್ತುತಿಸೋಣ**

10. ಭಾರತವನ್ನು ಪ್ರಪಂಚದ ರಾಷ್ಟ್ರಗಳಲ್ಲಿ ನಾಲ್ಕನೆಯ ಬಲಿಷ್ಟ ರಾಷ್ಟ್ರವಾಗಿ ಕರ್ತನು ಆಶೀರ್ವದಿಸಿ ಸುತ್ತಲು ಇರುವಂತ ನೆರೆಯ ರಾಷ್ಟ್ರಗಳು ಮತ್ತು ಉಗ್ರಗಾಮಿಗಳ ಸಂಘಟನೆಗಳಿಂದ ಈ ದೇಶವನ್ನು ಕಾಪಾಡುತ್ತಾ ಬರುತ್ತಿರುದಕ್ಕೋಸ್ಕರ **ಕರ್ತನನ್ನು ಸ್ತುತಿಸೋಣ**



# ದೇಶದ ಉಜ್ಜೀವನಕ್ಕಾಗಿ ಪ್ರಾರ್ಥಿಸಿರಿ

1. ತಮಿಳುನಾಡಿನಲ್ಲಿರುವ ಸಭೆಗಳಿಂದ ಉಜ್ಜೀವನವು ಪ್ರಾರಂಭವಾಗಿ, ಅದು ದಕ್ಷಿಣ ಭಾರತದ ರಾಜ್ಯಗಳಿಂದ ಹೊರಟು ಭಾರತ ಮತ್ತು ಪ್ರಪಂಚದ ರಾಷ್ಟ್ರಗಳಲ್ಲಿ ಹೊತ್ತಿ ಉರಿಯುವುದು!! ಎಂದು ಕರ್ತನು ಪ್ರಕಟಪಡಿಸಿರುವ ವಾಗ್ದನವು ನೆರವೇರಲು **ಪ್ರಾರ್ಥಿಸಿರಿ.**

2. "ದೇಶದಲ್ಲಿ ಉಜ್ಜೀವನದ ಬೆಂಕಿಯು ಹಾಕಲ್ಪಡವುದಕ್ಕೇ ಮುಂಚಿತವಾಗಿ ಸಭೆಗಳು ಶುದ್ಧೀಕರಿಸಲ್ಪಡಬೇಕು". ಇದುವೆ ದೇವರ ಚಿತ್ತ, ಸಭೆಗಳಲ್ಲಿ ಕಾಣಲ್ಪಡುವ ಕ್ರಮವಿಲ್ಲದ ಕಾರ್ಯ ಪಾರಂಪರ್ಯಗಳು, ಅಸಡ್ಡೆಗಳು, ಇಚ್ಛೆಗಳು, ಪದವಿಯ ಆಸೆಗಳು, ಸ್ವಾರ್ಥದ ಕಾರ್ಯಗಳು, ಹೊಟ್ಟೆಕಿಚ್ಚು, ಜಗಳಗಳು ಪರಿಪೂರ್ಣವಾಗಿ ದಹಿಸಲ್ಪಡಲು **ಪ್ರಾರ್ಥಿಸಿ.**

3. "ಎಲ್ಲಾ ಸಭೆಗಳಲ್ಲಿಯು ಉಜ್ಜೀವನವು ಹೊತ್ತಿ ಉರಿಯಲು ಪ್ರಾರ್ಥಿಸಿರಿ. ದೇವ ಸೇವಕರುಗಳು, ಹಿರಿಯರು, ಯೌವನಸ್ಥರು ಮತ್ತು ಚಿಕ್ಕ ಮಕ್ಕಳು ಇವರೆಲ್ಲರ ಮೇಲೆಯು **ಪ್ರಾರ್ಥನಾ ಆತ್ಮವು** ಸುರಿಸಲ್ಪಡುವಂತೆ, ಅವರೆಲ್ಲರು ಆದಿ ಸಭೆಗಳ ವಿಶ್ವಾಸಿಗಳಂತೆ ಪ್ರಾರ್ಥಿಸಲು ಹಾಗೂ ಮಾರ್ಪಡಲು **ಪ್ರಾರ್ಥಿಸಿರಿ**".

4. **ಲೂಕ 12:49** ವಾಕ್ಯವು ಹೇಳಲ್ಪಟ್ಟಿರುವ ಹಾಗೆ ಪರಿಶುದ್ಧ ದೇವರ ಆತ್ಮನು ಪ್ರತಿಯೊಂದು ಸಭೆಗಳಲ್ಲಿ ಇಳಿದು ಬರಲು ಎಲ್ಲರು ದೇವರ ಆತ್ಮನಿಂದ ತುಂಬಿಸಲ್ಪಡಲು **ಪಾರ್ಥಿಸಿರಿ**"

5. **ಯೆಶಾಯ 52:10, ಅಪೊ. 2:47** ವಾಕ್ಯದ ಪ್ರಕಾರ, ಭಾರತ ದೇಶದಲ್ಲಿ ಒಂದು ರಕ್ಷಣೆಯ ಉಜ್ಜೀವನ ಉಂಟಾಗಲು ಎಲ್ಲಾ ಗ್ರಾಮಗಳು ಮತ್ತು ಪಟ್ಟಣದಲ್ಲಿರುವ ಜನರು ಕೊಳ್ಳೆ ಕೊಳ್ಳೆಯಾಗಿ ರಕ್ಷಣೆ ಹೊಂದಿ, ಸಭೆಗಳಲ್ಲಿ ಸೇರಿಸಲ್ಪಡುವಂತ ಉಜ್ಜೀವನ ಉಂಟಾಗಲು **ಪ್ರಾರ್ಥಿಸಿರಿ.**

6. **ಮಲಾಕಿ 3:1–3** ವಾಕ್ಯದ ಪ್ರಕಾರ, ಭಾರತದಲ್ಲಿ ಶುದ್ಧೀಕರಣೆಯ ಉಜ್ಜೀವನ ಉಂಟಾಗಲು, ಸಭೆಗಳಲ್ಲಿ ರಾಜಕೀಯ ಕ್ಷೇತ್ರದಲ್ಲಿ ಮನುಷ್ಯರ ಯೋಚನೆಗಳಲ್ಲಿ ರೂಪಾಂತರ ಉಂಟಾಗಲು, ಅವರಲ್ಲಿ ಒಂದು ದೈವಿಕವಾದ ಸಂತೋಷವು, ಕಪಟವಿಲ್ಲದ ಹೃದಯ ಉಂಟಾಗುವಂತೆ **ಪ್ರಾರ್ಥಿಸಿರಿ.**

7. **ಅಪೊ 13:47–49** ವಾಕ್ಯದ ಪ್ರಕಾರ ಸತ್ಯವೇದದಲ್ಲಿ ಬರೆಯಲ್ಪಟ್ಟಿರುವ ಉಜ್ಜೀವನ ಭಾರತದಲ್ಲಿ ಉಂಟಾಗುವಂತೆ, ದೇವ ಸೇವಕರು, ದೇವ ಜನರು, ಸತ್ಯವೇದ ವಾಕ್ಯವನ್ನು ಪರೀಕ್ಷಿಸಿ ಧ್ಯಾನಿಸಿ, ಪ್ರಾರ್ಥಿಸುವಂತೆ ಮಾರ್ಪಡಲು **(ಅಪೊ17:11) ಪ್ರಾರ್ಥಿಸಿರಿ.**

8. **ಅಪೊ 2:43; 5:12** ವಾಕ್ಯದ ಪ್ರಕಾರ ನಡೆದಂತಹ ಒಂದು ಶಕ್ತಿಯುಳ್ಳ ಉಜ್ಜೀವನ ಭಾರತದಲ್ಲಿ ಉಂಟಾಗಲು, ದೇವ ಸೇವಕರು, ವಿಶ್ವಾಸಿಗಳು ಎದ್ದು, ಕರ್ತನ ಶಕ್ತಿಯನ್ನು ನಿರೂಪಿಸುವಂತೆ ಪ್ರತ್ಯೇಕರಾಗಲು ಕರ್ತನ ಶಕ್ತಿಯು ದೊಡ್ಡದಾಗಿ ದೇಶದಲ್ಲಿ ಪ್ರಕಟವಾಗಲು, ಬಹಳ ಸಾಧಾರಣವಾಗಿರುವವರ ಮೂಲಕ ಕರ್ತನು ಅಸಾಧಾರಣ ಕಾರ್ಯಗಳನ್ನು ಮಾಡಿ ತಮ್ಮ ನಾಮವನ್ನು ಮಹಿಮೆ ಪಡಿಸಲು **ಪ್ರಾರ್ಥಿಸಿರಿ**

9. ಪ್ರವಾದನೆಯ ಉಜ್ಜೀವನ (ದರ್ಶಿಸುವವರು, ದೇವರ ಧ್ವನಿಯನ್ನು ಕೇಳುವವರು) ಉಂಟಾಗಲು. ಯೌವನಸ್ಥರು, ಕನ್ಯೆಯರು, ದೇವ ಸೇವಕರು, ಸಭೆಯ ಹಿರಿಯರು, ಎಲ್ಲರ ಮೇಲೂ ಪ್ರವಾದನೆಯ ವರ ಸುರಿಸಲ್ಪಡಲು, ಅಷ್ಟು ಮಂದಿಯು ದೇವರ ರಾಜ್ಯದ ಸುವಾರ್ತೆಯನ್ನು ಪ್ರಸಂಗಿಸುವವರಾಗಿ **(ಮತ್ತಾಯ 24:14)** ಎಬ್ಬಿಸಲ್ಪಡಲು **ಪ್ರಾರ್ಥಿಸಿರಿ**

10. ದೇಶದಲ್ಲಿರುವ ಎಲ್ಲಾ ಸಭೆಗಳಲ್ಲಿಯೂ ಒಂದು ಉಜ್ಜೀವನ ಉಂಟಾಗಲು, ಸಭೆಗಳು ಇಲ್ಲದ ಎಲ್ಲಾ ಸ್ಥಳಗಳಲ್ಲಿಯೂ ಸಭೆಗಳು ಎಬ್ಬಿಸಲ್ಪಟ್ಟು ಅಧಿಕವಾಗಿ ಹರಡಲು ಸಭೆಗಳಿಗಾಗಿ **ಪ್ರಾರ್ಥಿಸಿ.**



# ಹೋರಾಡಿ ಪ್ರಾರ್ಥಿಸಿರಿ

1. ಉಜ್ಜೀವನವನ್ನು ತಡೆ ಮಾಡಲು ಬಿಚ್ಚಲ್ಪಟ್ಟಿರು ಎಲ್ಲಾ ವಿಧವಾದ ದುರಾತ್ಮಗಳನ್ನು ಕಟ್ಟಿರಿ.

(i) ಕರ್ತನಿಗಾಗಿ ಸೇವೆ ಮಾಡಲು ಬಿಡದೆ, ತಮಗಾಗಿಯೂ, ತಮ್ಮ ಸ್ಥಾಪನೆಗಳಿಗಾಗಿಯೂ ಕೆಲಸ ಮಾಡಲು ಪ್ರೇರೇಪಿಸುವ ದುರಾತ್ಮಗಳನ್ನು, ಕರ್ತನ ಚಿತ್ತವನ್ನು ನೆರವೇರಿಸಲು ಬಿಡದೆ ದೇವ ರಾಜ್ಯವನ್ನು ಕಟ್ಟುವುದಕ್ಕೆ ಬದಲಾಗಿ, ತಮಗೆಂದು ವೈಯಕ್ತಿಕವಾದ ರಾಜ್ಯವನ್ನು ಕಟ್ಟಿಕೊಳ್ಳುವಂತೆ ಮಾಡುವ ದುರಾತ್ಮಗಳನ್ನು (Spirit of Organization) ಕಟ್ಟಿ ಪ್ರಾರ್ಥಿಸಿರಿ. ದೇವ ಸೇವಕರೆಲ್ಲರು ದೇವರ ಚಿತ್ತವನ್ನು ನೆರವೇರಿಸುವವರಾಗುವಂತೆ ಪ್ರಾರ್ಥಿಸಿರಿ.

(ii) ಸುಳ್ಳು ಪ್ರವಾದನೆಗಳು, ಸುಳ್ಳು ಉಪದೇಶಗಳು, ಸುಳ್ಳು ಆರಾಧನೆ ಮಾಡಿ ತಮ್ಮನ್ನು ತಾವೇ ಸತ್ಯವಾದ ಉಜ್ಜೀವನ ವೀರರಾಗಿ ತೋರಿಸಿಕೊಳ್ಳುವ ಸೇವಕರು ಮಾನಸಾಂತರ ಹೊಂದಲು, ಅವರನ್ನು ಉಪಯೋಗಿಸುವ ದುರಾತ್ಮಗಳು ಕಟ್ಟಲ್ಪಡುವಂತೆ ಪ್ರಾರ್ಥಿಸಿರಿ

(iii) ಸಭೆಗಳೊಳಗೆ ನಿರ್ಲಕ್ಷ್ಯವಾದ ಕಾರ್ಯಗಳನ್ನು ಪ್ರೇರೇಪಿಸುವ ಸರ್ಪದ ಆತ್ಮಗಳನ್ನು ಕಟ್ಟಿ ಪ್ರಾರ್ಥಿಸಿರಿ. ಪ್ರಾರ್ಥಿಸಲು ಬಿಡದೆ, ಸೇವೆಯನ್ನು ಮಾಡಲು ಬಿಡದೆ ಯಾವಾಗಲು ಲೋಕದ ಯೋಚನೆಯಿಂದ ದೇವ ಜನರನ್ನು ತುಂಬಿಸಿ, ಅವರನ್ನು ಕರ್ತನಿಗಾಗಿ ಎದ್ದು ಪ್ರಕಾಶಿಸದಂತೆ ಮಾಡುವ ಸಕಲ ದುರಾತ್ಮಗಳನ್ನು ಕಟ್ಟಿಪ್ರಾರ್ಥಿಸಿರಿ.

(iv) ಸೈತಾನನು ಸಭೆಗಳಿಗೆ ವಿರುದ್ಧವಾದ ಕಾನೂನುಗಳನ್ನು ಅಮಲಿಗೆ ತಂದು ಸಭೆಗಳನ್ನು ಕೆಡಿಸಲು, ಸಭೆಗಳ ಮೂಲ ಹಿರಿಯರು, ಮಿಷಿನರಿಗಳು ಸೇರಿಸಿರುವ ಆಸ್ತಿಯನ್ನು (ಸ್ಥಳಗಳು, ಕಟ್ಟಡಗಳನ್ನು ಒಳಗೊಂಡು) ಅಪಹರಿಸುವಂತಹ ಕುತಂತ್ರ ಯೋಜನೆಗಳನ್ನು ಮಾಡುತ್ತಿದ್ದಾನೆ. ಅವನ ಕುತಂತ್ರಗಳು ಮುರಿಯಲ್ಪಡುವಂತೆ ಪ್ರಾರ್ಥಿಸಿರಿ.

2. ದೇಶದಲ್ಲಿ ದೇವರ ಕೋಪಾಗ್ನಿಯನ್ನು ತರುವಂತಹ ದುಷ್ಕಕಾರ್ಯಗಳನ್ನು ಮಾಡಲು ಪ್ರೇರೇಪಿಸುವಂತಹ **ದುಷ್ಟ ದುರಾತ್ಮಗಳನ್ನು ಕಟ್ಟಿರಿ.**

(i) ಆಕಾಶವನ್ನು, ಭೂಮಿಯನ್ನು, ಸಮುದ್ರವನ್ನು ಉಂಟುಮಾಡಿರುವ ಸರ್ವ ಸೃಷ್ಠಿಕರ್ತನನ್ನು, ದೇವಾಧಿ ದೇವನನ್ನು ಆರಾಧಿಸಲು ಬಿಡದೆ, "ಭಕ್ತಿ" ಎನ್ನುವ ಹೆಸರಲ್ಲಿ ತಪ್ಪಾದ ನಂಬಿಕೆಯನ್ನು ಜನರಲ್ಲಿ ಬಿತ್ತುವಂತೆ ದುರಾತ್ಮಗಳು, ಅವರ ಮನಕಣ್ಣುಗಳನ್ನು ಕುರುಡಾಗಿಸಲು ಯತ್ನಿಸುವ **ದುರಾತ್ಮಗಳನ್ನು ಕಟ್ಟಿ ಪ್ರಾರ್ಥಿಸಿರಿ.**

(ii) ಮನುಷ್ಯರಾಗಿರುವ ತಮ್ಮನ್ನು ದೇವರಾಗಿ ತೋರಿಸಿಕೊಂಡು ಜನರನ್ನು ಮರುಳುಗೊಳಿಸಿ ವಂಚಿಸುವ ದುರಾತ್ಮಗಳ ಕ್ರಿಯೆಗಳು ನಿರ್ಮೂಲವಾಗಲು **ಪ್ರಾರ್ಥಿಸಿರಿ.** ದುಷ್ಟ ಮನುಷ್ಯರ ವೇಷ ಬಯಲಾಗಲೂ **ಪ್ರಾರ್ಥಿಸಿರಿ.** ಅವರ ಬೊಕ್ಕಸಗಳು ಇರುವ ಸ್ಥಳಗಳು ಘೋಚರವಾಗಲು **ಪ್ರಾರ್ಥಿಸಿರಿ.** ಈ ರೀತಿಯಾಗಿ ಜನರನ್ನು ವಂಚಿಸುವ ಸಕಲ ದುರಾತ್ಮಗಳನ್ನು ಕಟ್ಟಿ **ಪ್ರಾರ್ಥಿಸಿರಿ.**

(iii) ಮಾಟ ಮಂತ್ರಗಳಿಂದ ಕ್ರಿಯೆಮಾಡುವಂತ ದುರಾತ್ಮಗಳು ಲಯವಾಗಲು ಪ್ರಾರ್ಥಿಸಿರಿ. ರಕ್ತ ದಾಹವಿರುವ ಆತ್ಮಗಳ ನರಬಲಿಗಳು ಕೊಡಲ್ಪಡುವುದರ ಮೂಲಕ ತನ್ನನ್ನು ಬಲಪಡಿಸಿಕೊಳ್ಳುವ ದುರಾತ್ಮಗಳ ಬಲಿಪೀಠಗಳು ಮತ್ತು ಅವುಗಳ ವಾಸಸ್ಥಳಗಳು ಪರಿಪೂರ್ಣವಾಗಿ ಲಯವಾಗಲು **ಪ್ರಾರ್ಥಿಸಿರಿ.**

(iv) ಜನರನ್ನು ವೇದನೆ ಪಡಿಸುವ ಯಾವ ವಿಧವಾದ ಮಾಟ ಮಂತ್ರಗಳು ಫಲಿಸಲೇಬಾರದು, ದಟ್ಟವಾದ. ಕಾಡುಗಳು, ಗುಹೆಗಳು ಮತ್ತು ಪರ್ವತ ಪ್ರದೇಶಗಳಲ್ಲಿ ಕ್ರಿಯೆ ಮಾಡುವ, ಈ ಬಗೆಯ ಪಿಶಾಚಿಯ ಕ್ರಿಯೆಗಳನ್ನು ಲಯಮಾಡುವಂತೆ **ಪ್ರಾರ್ಥಿಸಿರಿ.**

(v) ವ್ಯಭಿಚಾರ ಹಾಗೂ ಕಾಮವಿಕಾರವನ್ನು ಉಂಟುಮಾಡುವ ದುರಾತ್ಮಗಳು ಕಟ್ಟಲ್ಪಡುವಂತೆ **ಪ್ರಾರ್ಥಿಸಿರಿ.** ತಮ್ಮ ಸ್ವಂತ ಮಕ್ಕಳು, ಸ್ವಂತ ಸಹೋದರ-ಸಹೋದರಿಯರೆಂದು ಕೂಡ ಪರಿಗಣಿಸದೆ ಅವರೊಂದಿಗೆ ತಮ್ಮ ಶಾರೀರಿಕ ಇಚ್ಛೆಗಳನ್ನು ತೀರಿಸಿಕೊಳ್ಳುವ ವ್ಯಭಿಚಾರದ ಕ್ರಿಯೆಗಳನ್ನು ಮಾಡಲು ಪ್ರೇರೇಪಿಸುವ ದುರಾತ್ಮಗಳು, ಕರ್ತನಾದ ದೇವರು ಅಸಯ್ಯ ಪಡುವ ಘೋರ ಪಾಪವಾಗಿರುವ ಸಲಿಂಗಕಾಮವನ್ನು ಪ್ರೇರೇಪಿಸುವ ದುರಾತ್ಮಗಳನ್ನು ಕಟ್ಟಿ **ಪ್ರಾರ್ಥಿಸಿರಿ.**

(vi) ಕುಡುಕತನ, ಮಧ್ಯಪಾನ, ಮಾರಕ ವಸ್ತುಗಳು, ಅಂತರ್ಜಾಲ ಮೂಲದ ಅಶ್ಲೀಲ ದೃಶ್ಯಗಳು, ವಿಡಿಯೋ ಗೇಮ್‌ಗಳ ಮೂಲಕ ಜನರನ್ನು ವಿಪರೀತವಾದ ಕಾರ್ಯಗಳನ್ನು ಮಾಡಲು ಪ್ರೇರೇಪಿಸುವ ದುರಾತ್ಮಗಳು ಕಟ್ಟಲ್ಪಡಲು **ಪ್ರಾರ್ಥಿಸಿರಿ.**

3. ದೇಶದಲ್ಲಿರುವ ಅಧಿಕಾರದ ಸ್ಥಾನಗಳಲ್ಲಿ ಕ್ರಿಯೆ ಮಾಡುವ, ದೊರೆತನ ಮಾಡುವ ಅಶುದ್ಧ ಆತ್ಮಗಳು ಕಟ್ಟಲ್ಪಡಲು ಪ್ರಾರ್ಥಿಸಿರಿ. ಕೋಮುಗಲಬೆಗಳನ್ನು ಎಬ್ಬಿಸಿ ಜನರನ್ನು ತನ್ನ ನಿಯಂತ್ರದಲ್ಲಿ ಇಟ್ಟಿರುವ ದುಷ್ಟ

ಮನುಷ್ಯರನ್ನು (ಮತವಾದಿಗಳು, ರಾಜಕಾರಣಿಗಳು, ಉಗ್ರಗಾಮಿಗಳು, ಚಲನಚಿತ್ರ ಕ್ಷೇತ್ರಕ್ಕೆ ಸಂಭದ ಪಟ್ಟವರು, ದೊಡ್ಡ ವ್ಯಾಪಾರಸ್ಥರು...) ತನ್ನ ನಿಯಂತ್ರದಲ್ಲಿರುವ ದುರಾತ್ಮನ ಕ್ರಿಯೆಗಳನ್ನು ಕಟ್ಟಿ ಪ್ರಾರ್ಥಿಸಿ.

4. ವಿಪತ್ತುಗಳು, ಆತ್ಮಹತ್ಯೆಗಳು, ಭ್ರೂಣ ಹತ್ಯಗಳು, ಹೆಣ್ಣು ಶಿಶು ಹತ್ಯ, ಕೊಲೆಗಳಂತಹ ವಿಪರೀತವಾದ ಕಾರ್ಯಗಳನ್ನು ಪ್ರೇರೇಪಿಸಿ ತನ್ನ ಮಾಂಸಿಕ ವೈರಾಗ್ಯವನ್ನು ತೀರಿಸಿ, ಅದರ ಮುಖಾಂತರ ತನ್ನನ್ನು ತಾನೆ ಬಲಪಡಿಸಿಕೊಳ್ಳುವ ಅಶುದ್ಧ ಆತ್ಮಗಳು ಕಟ್ಟಲ್ಪಡುವಂತೆ **ಪ್ರಾರ್ಥಿಸಿ.**

5. ವಾಯು ಮಂಡಲದಲ್ಲಿದ್ದುಕೊಂಡು ಕ್ರಿಯೆ ಮಾಡುವ ದುರಾತ್ಮಗಳ ಸೈನ್ಯಗಳು ಸಂಪೂರ್ಣವಾಗಿ ಚದುರಿಸ್ಪಲ್ಪಡಲು ಪ್ರಾರ್ಥಿಸಿರಿ. ಭಾರತದಲ್ಲಿ ಕ್ರಿಯೆ ಮಾಡುವ ದುಷ್ಟ ಬಲಿಷ್ಠನು (ಸೈತಾನನು) ಕಟ್ಟಲ್ಪಡುವಂತೆ **ಪ್ರಾರ್ಥಿಸಿರಿ.** ಜನರನ್ನು ಮದಗೆಡುವಂತೆ ಮಾಡಿ, ಅವರ ಮನ ಕಣ್ಣುಗಳನ್ನು ಕುರುಡಾಗಿಸಿ, ಅವರನ್ನು ಕಾರ್ಯ ಮಾಡಲು ಬಿಡದ ದುರಾತ್ಮಗಳು ಕಟ್ಟಲ್ಪಡುವಂತೆ ಪ್ರಾರ್ಥಿಸಿರಿ. ಎಲ್ಲಾ ವಿಧದ ಜನಗಳಲ್ಲೂ ಆತ್ಮೀಕವಾಗಿ ಒಂದು ತಿಳುವಳಿಕೆ ಉಂಟಾಗುವಂತೆ **ಪ್ರಾರ್ಥಿಸಿ.**



# ಬಿನ್ನಹಿಸಿ ಪ್ರಾರ್ಥಿಸಿ

1. ದೇವರಾಗಿರುವ ಕರ್ತನ ಕನಿಕರಕ್ಕಾಗಿ ಬೇಡಿಕೊಂಡು ಪ್ರಾರ್ಥಿಸಿ. ನಾವು ಮಾಡಿದ ಪಾಪಗಳನ್ನು, ನಮ್ಮ ದೇಶವು ಮಾಡಿದ ಪಾಪವನ್ನು ಕರ್ತನು ಕ್ಷಮಿಸುವಂತೆ **ಪ್ರಾರ್ಥಿಸಿ.** **(ನೆಹಮಿಯ 1:6–7, ದಾನಿಯೇಲ 9:4–10)**
2. **1 ತಿಮೋತಿ 2:4** ವಾಕ್ಯದ ಪ್ರಕಾರ ನಮ್ಮ ಭಾರತದಲ್ಲಿರುವಂತ ಸುಮಾರು **138 ಕೋಟಿ** ಜನರು ರಕ್ಷಣೆಹೊಂದಲು, ಅವರ ಮನ ಕಣ್ಣುಗಳು ತೆರೆಯಲ್ಪಡುವಂತೆ, ಭಕ್ತಿಯುಳ್ಳ ನಿಮ್ಮ ದೇಶದ ಜನರಿಗೆ ಕರ್ತನು ತನ್ನನ್ನು ಪ್ರಕಟಿಸಬೇಕೆಂದು **ಪ್ರಾರ್ಥಿಸಿ.**
3. ಅಂತ್ಯಕಾಲದ ಉಜ್ಜೀವನದಲ್ಲಿ ಚಿಕ್ಕ ಮಕ್ಕಳ ಪಾತ್ರ ಬಹಳ ಮುಖ್ಯವಾದದ್ದು ಆದ್ದರಿಂದ ಈಗ ಸೈತಾನನ ಗಮನವು ಚಿಕ್ಕ ಮಕ್ಕಳ ಮೇಲೆ ತಿರುಗಿದೆ. ಚಿಕ್ಕ ವಯ್ಯಸಿನಲ್ಲೇ ಘೋರ ಪಾಪಗಳು ಅವರನ್ನು ಆವರಿಸಿವೆ! ದೇಶದಲ್ಲಿ ಎಲ್ಲೆಲ್ಲೂ ಚಿಕ್ಕ ಮಕ್ಕಳಿಗೆ ರಕ್ಷಣೆ ಇಲ್ಲಾ, ಕರ್ತನೇ ಚಿಕ್ಕಮಕ್ಕಳನ್ನು ಕಾಪಾಡುವ ಹಾಗೆ ಆ ಒಂದೊಂದು ಚಿಕ್ಕ ಮಕ್ಕಳ (ಸಮುವೇಲನ ಹಾಗೆ) ಪ್ರವಾದನೆಯ ಅಭಿಷೇಕ ಹೊಂದಿ ಬೆಳೆಯಲು **ಪ್ರಾರ್ಥಸಿ.**

4. ಬರಲಿಕ್ಕಿರುವ ಉಜ್ಜೀವನಕ್ಕಾಗಿ ಒಂದು 'ಯೌವನ ಸಂತತಿ' (ಒಂದು ಹೊಸ ತಲೆಮಾರು) ಹೊರಟು ಬರುತ್ತದೆ! ಬಹುತೇಕ ಯೌವನಸ್ಥರು ಕರ್ತನಿಗಾಗಿ ಒಂದು ಅತಿ ದೊಡ್ಡ 'ಸೇನೆಯಾಗಿ' ಎಬ್ಬಿಸಲ್ಪಡಲಿಕ್ಕಿದ್ದಾರೆ! ಇದನ್ನು ಅರಿತಿರುವ ಸೈತಾನನು ಯುವಕರನ್ನು ಪಾಪದಲ್ಲೂ, ಇಚ್ಛೆಗಳಲ್ಲೂ, ಪೂಂಡಾಟಗಳು, ಪ್ರಾಪಂಚಿಕವಾದ ಬೇಡವಿಲ್ಲದ ಕಾರ್ಯಗಳಲ್ಲೂ ದೆಸೆತಿರುಗಿಸಿ, ಅವರನ್ನು ನರಕದ ಬಾಗಿಲಿಗೆ ನೇರವಾಗಿ ನಡಿಸುತ್ತಾನೆ. ಅವನಿಂದ ಸೆರೆಯಿಡಲ್ಪಟ್ಟಿರುವ ನಮ್ಮ ದೇಶದ 'ಯೌವನಸ್ಥರು' ಕರ್ತನಿಂದ ಬಿಡುಗಡೆ ಹೊಂದುವಂತೆ, ಅವರೆಲ್ಲರೂ ರಕ್ಷಿಸಲ್ಪಟ್ಟು ಕರ್ತನಿಗೆಂದು ಒಂದು ದೊಡ್ಡ 'ಸೈನ್ಯವಾಗಿ' ಎಬ್ಬಿಸಲ್ಪಡಲು **ಬಿನ್ನಹಿಸಿ ಪ್ರಾರ್ಥಿಸೋಣ.**

5. ಸುವಾರ್ತೆಗೆ ವಿರೋದವಾಗಿ ಏಳುವವರು, ಮತಾಭಿಮಾನವುಳ್ಳವರು ಸಭೆಯನ್ನು ಒಡೆದುರುಳಿಸಲು ಯೋಚನೆ ಮಾಡುವವರು, ಸಭೆಗೆ ಸ್ವಂತವಾದ ನೆಲಗಳನ್ನು ಅಪಹರಿಸಲೂ ಪ್ರಯತ್ನ ಮಾಡುವವರು, ಮನಬಂದಂತೆ ದೇವ ಸೇವಕರನ್ನು ಹಿಂಸಿಸುವವರನ್ನು ದೇವರು ರಕ್ಷಿಸಲು ಪ್ರಾರ್ಥಿಸಿರಿ, ಸೌಲನನ್ನು ಪೌಲನನ್ನಾಗಿ ಮಾರ್ಪಡಿಸಿದ ದೇವರು ಇಂತಹ ಜನರನ್ನು ಸಂಧಿಸುವಂತೆ **ಬಿನ್ನಹಿಸಿ ಪ್ರಾರ್ಥಿಸೋಣ.**

6. ಕೊರ್ನೆಲಿಯನನ್ನು ಆತನ ಕುಟುಂಬವನ್ನು ರಕ್ಷಿಸಿದ ದೇವರು ( ಅಪೋ 10 ) ಸೆರೆಮನೆಯ ಕಾವಲುಗಾರನ ಕುಟುಂಬವನ್ನು ರಕ್ಷಿಸಿದ ದೇವರು ( ಅಪೋ 16 ), ನಮ್ಮ ದೇಶದಲ್ಲಿರುವ ಆಧಿಕಾರಿಗಳನ್ನು, ರಾಜಕಾರಣಿಗಳನ್ನು ರಕ್ಷಿಸಿ ತಮಗೆ ಸಾಕ್ಷಿಯಾಗಿ ನಿಲ್ಲಿಸುವಂತೆ **ಬಿನ್ನಹಿಸಿ ಪ್ರಾರ್ಥಿಸಿ.**

7. ಆದಿ ಅಪೋಸ್ತಲರ ದಿನಗಳಲ್ಲಿ ಮಾಯ ವಿದ್ಯೆಗಾರರೂ, ಮಂತ್ರವಾದಿಗಳೂ, 'ಮಾರ್ಸ್ ಬೆಟ್ಟ' ನ್ಯಾಯಧಿಪತಿಯೂ ರಕ್ಷಣೆ ಹೊಂದಲೂ, ಬಹಿರಂಗವಾಗಿ ತಮ್ಮ ಆತ್ಮೀಕವಾದ ಕಿಯೆಗಳನ್ನು ಪ್ರಕಟಪಡಿಸಿ ಅರಿಕೆಯಿಡುವಂತೆ (ಅಪೋ 19:18, 19) **ಪ್ರಾರ್ಥಿಸಿರಿ.**

8. ರಕ್ತಾಂಭರವನ್ನು ಮಾರಾಟ ಮಾಡುತ್ತಿದ್ದ ಲೂದ್ಯಳ ಹೃದಯವನ್ನು ಕರ್ತನು ತೆರೆದು ರಕ್ಷಿಸಿದ ಹಾಗೆ ನಮ್ಮ ಭಾರತ ದೇಶದಲ್ಲಿರುವ ಪ್ರಬಲವಾಗಿರುವ ವ್ಯಪಾರಿಗಳು, ವಿಜ್ಞಾನಿಗಳು, ಕ್ರೀಡಾಪಟುಗಳು, ಚಲನಚಿತ್ರ ಪ್ರಬಲ್ಯರು ರಕ್ಷಣೆ ಹೊಂದಲು, ಅವರೆಲ್ಲರು ಕರ್ತನ ಸೇವೆಯನ್ನು ಹೊರುವವರಾಗಿ, ಪ್ರಾರ್ಥಿಸುವವರಾಗಿ ಮಾರ್ಪಡಲು **ಬಿನ್ನಹಿಸಿ ಪ್ರಾರ್ಥಿಸಿ.**

9. ನಿಮ್ಮ ಸ್ವಂತ ರಾಜ್ಯದ ಜನರು, ಜಿಲ್ಲೆಯ ಜನರು, ನಿಮ್ಮ ಊರುಗಳಲ್ಲಿರುವ, ಬೀದಿಗಳಲ್ಲಿರುವ ಜನರು ರಕ್ಷಣೆ ಹೊಂದಲು, ನಿಮ್ಮೊಟ್ಟಿಗೆ ಕೆಲಸ ಮಾಡುವವರು, ನಿಮ್ಮೊಂದಿಗೆ ಸಂಪರ್ಕದಲ್ಲಿರುವವರು, ಎಲ್ಲರೂ ರಕ್ಷಣೆ ಹೊಂದಲು **ಬಿನ್ನಹಿಸಿ ಪ್ರಾರ್ಥಿಸೋಣ.**

10. ನಿಮ್ಮ ಸ್ವಂತ ಕುಟುಂಬದಲ್ಲಿ ಇನ್ನೂ ರಕ್ಷಣೆ ಹೊಂದದೆ ಇರುವವರು, ನಿಮ್ಮ ಸಂಭಂದಿಕರು, ನೀವು ಆರಾಧನೆ ಮಾಡಲು ಹೋಗುವ ಸ್ಥಳಗಳಲ್ಲಿ ರಕ್ಷಣೆಯ ದೃಡತೆ ಇಲ್ಲದವರು, ರಕ್ಷಿಸಲ್ಪಡಲು **ಪ್ರಾರ್ಥಿಸಿರಿ.**



# ರಕ್ಷಣೆಗಾಗಿ ಪ್ರಾರ್ಥಿಸಿರಿ

**1. ಕುಟುಂಬಗಳು ರಕ್ಷಣೆಯಿಂದಿರಲು ಪ್ರಾರ್ಥಿಸಿರಿ !**



ಕುಟುಂಬಗಳು ಸರಿಯಾಗಿರುವುದಾದರೆ, ಸಮಾಜವು ಸರಿಯಾಗಿರುವುದು. ಆದ್ದರಿಂದ ಈ ಅಂತ್ಯಕಾಲದಲ್ಲಿ ಕುಟುಂಬಗಳನ್ನು ಹಾಳು ಮಾಡಲು ಸೈತಾನನು ಬಲವಾದ ವಿಧಗಳಲ್ಲಿ ಸಂಚು ಮಾಡುತ್ತಾನೆ. ಕುಟುಂಬದಲ್ಲಿ ಕಳ್ಳ ಸಂಭಂದಗಳು, ವಿವಾಹ ವಿಚ್ಚೆಧನಗಳು, ಹೆತ್ತವರು ಮತ್ತು ಮಕ್ಕಳ ನಡುವೆ ಅಸಮಾಧಾನಗಳು ಉಂಟಾಗದಂತೆ, ಎಲ್ಲಾ ಕುಟುಂಬಗಳಲ್ಲಿ ಸಮಾಧಾನ ಉಂಟಾಗುವಂತೆ **ಪ್ರಾರ್ಥಿಸಿ.**

**2. ಮಕ್ಕಳ ರಕ್ಷಣೆಗಾಗಿ ಪ್ರಾರ್ಥಿಸಿ !**



ಭವಿಷ್ಯದ ತಲೆಮಾರಿನ ಮಕ್ಕಳ ಮಾನಸಿಕ ಪರಿಸ್ಥಿತಿಯನ್ನು ಕರ್ತನು ಸಂರಕ್ಷಿಸುವಂತೆ **ಪ್ರಾರ್ಥಿಸಿ.** ಮಾನಸಿಕ ಒತ್ತಡ, ಕಾಮವಿಕಾರತೆ, ತಪ್ಪಾದ ಪಾಪ ಸ್ವಭಾವಗಳಲ್ಲಿ ಮಕ್ಕಳು ಸಿಲುಕದಂತೆ ಪ್ರಾರ್ಥಿಸಿರಿ. ಚಿಕ್ಕ ಬಾಲಕಿಯರು, ಪ್ರಾಯದ ಹೆಣ್ಣು ಮಕ್ಕಳು ಅಧಿಕವಾಗಿ ಅಪಹರಿಸಲ್ಪಡುತ್ತಿದ್ದಾರೆ. ಇಂತಹ ಕಾರ್ಯಗಳು ತಡೆಯಿಡಲ್ಪಡುವಂತೆ **ಪ್ರಾರ್ಥಿಸಿರಿ.**

**3. ಉಗ್ರಗಾಮಿಗಳ ಕುತಂತ್ರಗಳಿಂದ ದೇಶವು ರಕ್ಷಿಸಲ್ಪಡಲು ಪ್ರಾರ್ಥಿಸಿರಿ!**

ದೇಶದ ಒಳಗಿಂದಲೂ, ಹೊರಗಿನಿಂದಲೂ ಭಾರತ ದೇಶಕ್ಕೆ ಹಾನಿ ಉಂಟುಮಾಡಲು, ಅನೇಕ ಸಂಘಟನೆಗಳು ಕೆಲಸ ಮಾಡುತ್ತಿವೆ. ಮಹೊಯಿಸ್ಟಗಳು, ನಕ್ಸಲೈಟ್ಸ್‌ಗಳಂತಹ ಕ್ರೂರ ಸಂಘಟನೆಗಳು ಮಾಡುವ ಎಲ್ಲಾ ಕುತಂತ್ರಗಳನ್ನು ಕರ್ತನು ತಡೆಹಿಡಿಯುವಂತೆ **ಪ್ರಾರ್ಥಿಸಿರಿ.** ಜನರು ಅಧಿಕವಾಗಿ ಕೂಡುವಂತಹ ದೇವಾಲಯಗಳು, ವಿಮಾನ ನಿಲ್ದಾಣಗಳು, ಕಛೇರಿಗಳು, ವ್ಯಾಪಾರ ಸ್ಥಳಗಳು, ವಿದ್ಯಾ ಸಂಸ್ಥೆಗಳು, ಇವುಗಳ ಮೇಲೆ ದೇವರ ರಕ್ಷಣಾ ಹಸ್ತವಿರುವಂತೆ **ಪ್ರಾರ್ಥಿಸಿರಿ.**



**4. ನೆರೆ ರಾಷ್ಟ್ರಗಳಿಂದ ಯಾವುದೇ ಅಪಾಯಗಳು ಬಾರದಂತೆ ಪ್ರಾರ್ಥಿಸಿರಿ!**

ನಮ್ಮ ಭಾರತ ದೇಶದ ಸುತ್ತಲಿರುವ ನೆರೆ ರಾಷ್ಟ್ರಗಳಿಂದ ನಮ್ಮ ದೇಶಕ್ಕೆ ಯಾವುದೇ ಅಪಾಯಗಳು ಸಂಭವಿಸದಂತೆ **ಪ್ರಾರ್ಥಿಸಿ.** ಅಷ್ಟು ಮಾತ್ರವಲ್ಲ ಚೀನಾ, ಪಾಕಿಸ್ತಾನ, ಶ್ರೀಲಂಕಾ ದೇಶಗಳಿಂದ ನಮ್ಮ ಭಾರತ ದೇಶಕ್ಕೆ ಯಾವುದೇ ಅಪಾಯಗಳು ಬಾರದಂತೆ, ಗಡಿ ಪ್ರದೇಶಗಳು, ಕರಾವಳಿಗಳು ರಕ್ಷಿಸಲ್ಪಡಲು **ಪ್ರಾರ್ಥಿಸಿರಿ.**




**5. ನೀರು ಮತ್ತು ಗಾಳಿಯಿಂದ ಹಾನಿ ಉಂಟಾಗದಂತೆ ಪ್ರಾರ್ಥಿಸಿರಿ!**

ನಮ್ಮ ಭಾರತ ದೇಶದ ಜಲರಾಶಿಗಳು ಪರಾಂಬರಿಸಲ್ಪಡಲು ಹಾಗೂ ಕುಡಿಯುವ ನೀರಿನ ಮೇಲೆ ಕರ್ತನ ರಕ್ಷಣೆ ಇರಲು, 'ಸುನಾಮಿ' ನಂತಹ ಜಲಪ್ರಳಯಗಳು ಇನ್ನು ಮುಂದೆ ದೇಶದಲ್ಲಿ ಬರಲೇಬಾರದು. ಸಮುದ್ರ ತೀರದ ಗ್ರಾಮಗಳು, ಮನೆಗಳು ಬಾಧಿಸಲ್ಪಡಬಾರದು, ದ್ವೀಪಗಳು ರಕ್ಷಿಸಲ್ಪಡಬೇಕು, ಸುಂಟರಗಾಳಿ, ಚಂಡಮಾರುತ ಗಾಳಿಯ ಕಲುಷಿತ, ಇಂತಹ ಅಪಾಯಗಳು ದೇಶಕ್ಕೆ ಬರಲೇಬಾರದು. ಈ ಕಾರ್ಯಗಳಿಗಾಗಿ **ಪ್ರಾರ್ಥಿಸಿರಿ.**



**6. ಸಮುದ್ರವನ್ನು ಅಧಾರವಾಗಿಸಿಕೊಂಡು ವ್ಯಾಪಾರಮಾಡುವವರಿಗಾಗಿ ಪ್ರಾರ್ಥಿಸಿರಿ!**

ಇಂತಹ ವ್ಯಾಪಾರ ಮಾಡುವವರ ಜೀವನಾಧಾರಗಳು ಕಾಪಾಡಲ್ಪಡಬೇಕು. ಇದರಲ್ಲಿ ಕೆಲಸ ಮಾಡುವವರಿಗೆ ಹಾಗೂ ವ್ಯಾಪಾರಿಗಳ ಶಾರೀರಿಕ ಆರೋಗ್ಯವಸ್ಥೆಯು ಬದ್ಧವಾಗಿರಬೇಕು. ತಮ್ಮ ಪ್ರಯಾಸಕ್ಕೆ ತಕ್ಕ ಪ್ರತಿಫಲವನ್ನು ಅವರು ಅನುಭವಿಸಬೇಕು.



ಯಜಮಾನರು ಬಡ ಕೂಲಿ ಕಾರ್ಮಿಕರಿಗೆ ಮಾಡುವ ಅನ್ಯಾಯಗಳು ಲಯವಾಗುವಂತೆ ಪ್ರಾರ್ಥಿಸಿರಿ.

**7. ರೈತರ ಸಂರಕ್ಷಣೆಗಾಗಿ ಪ್ರಾರ್ಥಿಸಿರಿ!**



ಬೇಸಾಯವೇ ನಮ್ಮ ಭಾರತ ದೇಶದ ಅರ್ಥಿಕತೆಯ ಬೆನ್ನೆಲುಬು! ಆದರೆ ಇಂದು ರೈತರು ಬಹುತೇಕವಾಗಿ ಭಾದೆಗಳಿಗೆ ಒಳಗಾಗುತ್ತಿದ್ದಾರೆ. ಬೇಸಾಯ ನೆಲಗಳು ಭಾದೆಗೆ ಒಳಗಾಗಬಾರದು, ಬೇಸಾಯವು ಆಶೀರ್ವದಿಸಲ್ಪಪಡಬೇಕು. ರೈತರು ಮಾನಸಿಕವಾಗಿ ಕುಂದಿ ಹೋಗದಂತೆ ಪ್ರಾರ್ಥಿಸಿ. ಒಬ್ಬ ರೈತನು ಕೂಡ ಆತ್ಮಹತ್ಯೆ ಮಾಡಿಕೊಳ್ಳಬಾರದು, ಬೇಸಾಯ ನೆಲಗಳು ಸಂರಕ್ಷಿಸಲ್ಪಡಬೇಕು, ರೈತರ ಬೆಳೆಗಳು ಸಂರಕ್ಷಿಸಲ್ಪಡಬೇಕು ಇದಕ್ಕಾಗಿ ಪ್ರಾರ್ಥಿಸಿ.

**8. ರಸ್ತೆ ಬೀದಿಗಳಲ್ಲಿ ವ್ಯಾಪಾರ ಮಾಡುವವರ ಸಂರಕ್ಷಣೆಗಾಗಿ ಪ್ರಾರ್ಥಿಸಿರಿ!**



ದೊಡ್ಡ ದೊಡ್ಡ ಕಾರ್ಪೋರೇಟ್ ವ್ಯಾಪಾರಿಗಳ ಕ್ರಿಯೆಗಳಿಂದ ಸಣ್ಣ ಪುಟ್ಟ ವ್ಯಾಪಾರಿಗಳು, ರಸ್ತೆ ಬೀದಿಗಳ ವ್ಯಾಪಾರಿಗಳು, ಅವರ ಜೀವನಾಧಾರ ಭಾದೆಗೆ ಒಳಗಾಗಬಾರದು, ಅವರ ವ್ಯಾಪಾರಗಳು ಸಂರಕ್ಷಿಸಲ್ಪಡಬೇಕು, ತೋಟಗಾರಿಕೆ ಮಾಡುವವರು, ಎಸ್ಟೇಟ್‌ನಲ್ಲಿ ಕೆಲಸ ಮಾಡುವವರ ಸಂರಕ್ಷಣೆಗಾಗಿ ಪ್ರಾರ್ಥಿಸಿ.

**9. ದೇಶದ ಆರ್ಥಿಕತೆಯ ಸಂರಕ್ಷಣೆಗಾಗಿ ಪ್ರಾರ್ಥಿಸಿರಿ!**



ಸಮೀಪ ಕಾಲಗಳಲ್ಲಿ ನಮ್ಮ ಭಾರತ ದೇಶದಲ್ಲಿ ಆರ್ಥಿಕತೆಯ ಬೆಳವಣಿಗೆ ಇಳಿಯುತ್ತಲೇ ಬರುತ್ತಿದೆ. ಈ ಸ್ಥಿತಿ ಬದಲಾಗಬೇಕು, ದೇಶದ ಆರ್ಥಿಕತೆ ಹೆಚ್ಚಿಸಲ್ಪಡಬೇಕು, ಕಾನೂನು ಕ್ಷೇತ್ರದವರು, ಸರ್ಕಾರದ ಅಧಿಕಾರಿಗಳು, ರಿಸರ್ವ್ ಬ್ಯಾಂಕ್ ಅಧಿಕಾರಿಗಳಿಗೆ ಕರ್ತನು ವಿಶೇಶವಾದ ಜ್ಞಾನವನ್ನು ದಯಾಪಾಲಿಸುವಂತೆ, ಲೋಕ ರಾಷ್ಟ್ರಗಳ ಮಧ್ಯೆ ನಮ್ಮ ಭಾರತ ದೇಶದ ಆರ್ಥಿಕತೆ ಹೆಚ್ಚುವಂತೆ ಪ್ರಾರ್ಥಿಸಿರಿ.

**10. ವೈದ್ಯಕೀಯ ಕ್ಷೇತ್ರ ಮತ್ತು ವಿದ್ಯಾ ಸಂಸ್ಥೆಗಳ ಸಂರಕ್ಷಣೆಗಾಗಿ ಪ್ರಾರ್ಥಿಸಿರಿ!**



ತಪ್ಪಾಗಿ ಕೊಡಲ್ಪಡುವ ಚಿಕಿತ್ಸೆಗಳ ಮೂಲಕ ದೇಶದಲ್ಲಿರುವ ವೃದ್ಧರು, ಯುವಕರು ಭಾದೆಗೆ ಒಳಗಾಗಬಾರದು. 'ವಿದ್ಯೆ'! ಎನ್ನುವ ಹೆಸರಲ್ಲಿ ತಪ್ಪಾದ ವಿದ್ಯಾಭ್ಯಾಸವನ್ನು ಮತ್ತು ಅಜ್ಞಾನ ಕ್ರಿಯೆಗಳಿಗೆ ಮುಖ್ಯತ್ವ ಕೊಡುವ ಕಾರ್ಯಗಳು ವಿದ್ಯಾಸಂಸ್ಥೆಗಳಲ್ಲಿ ನಡೆಯಬಾರದು, ಈ ಎರಡು ಕ್ಷೇತ್ರಗಳನ್ನು ಕರ್ತನು ಸಂರಕ್ಷಿಸಲು ಪ್ರಾರ್ಥಿಸಿರಿ.




# ಆಶೀರ್ವದಿಸಿ ಪ್ರಾರ್ಥಿಸಿ




1. ನಮ್ಮ ದೇಶವು ಪ್ರಪಂಚದ ರಾಷ್ಟ್ರಗಳ ಮಧ್ಯೆ ಎಲ್ಲಾ ಕ್ಷೇತ್ರಗಳಲ್ಲೂ ಆಶೀರ್ವದಿಸಲ್ಪಟ್ಟ ದೇಶವಾಗಿ ಹೊರಹೊಮ್ಮಬೇಕು. ಎಲ್ಲಾ ಜನರಿಗೂ ದಿನ ನಿತ್ಯ ಸೌಕರ್ಯಗಳು ಸಂದಿಸಲ್ಪಡಲು, ಆಹಾರ, ಬಟ್ಟೆ, ವಾಸ-ಸ್ಥಳ, ಶುದ್ಧವಾದ ಕುಡಿಯುವ ನೀರು, ರಸ್ತೆಯ ಸೌಲಭ್ಯಗಳು, ವಿದ್ಯುತ್ ಸೌಲಭ್ಯಗಳು, ಶೌಚಾಲಯಗಳು, ಸ್ವಂತ ಮನೆಗಳು ಲಭ್ಯವಾಗುವಂತೆ, ಇಂತ ಸೌಲಭ್ಯಗಳಲ್ಲಿ ನಮ್ಮ ದೇಶವು ಆಶೀರ್ವದಿಸಲ್ಪಡುವಂತೆ ದೇಶವನ್ನು ಆಶೀರ್ವದಿಸಿ **ಪ್ರಾರ್ಥಿಸಿರಿ.**



2. ದೇಶವನ್ನು ಆಳ್ವಿಕೆ ಮಾಡುವವರಿಗಾಗಿ ಪ್ರಾರ್ಥಿಸಿರಿ. ನಮ್ಮ ರಾಷ್ಟ್ರಪತಿ, ಪ್ರಧಾನ ಮಂತ್ರಿ, ಕೇಂದ್ರ ಸಚೀವರು, ಎಲ್ಲಾ ರಾಜ್ಯದ ಗವರ್ನರ್, ಮುಖ್ಯ ಮಂತ್ರಿಗಳು ಹಾಗೂ ಮಂತ್ರಿಗಳು ಆಶೀರ್ವದಿಸಲ್ಪಡಲು, ಅವರು ಸಂರಕ್ಷಿಸಲ್ಪಡಲು, ಅವರ ಮೂಲಕ ದೇಶದಲ್ಲಿ ಅನೇಕ ಒಳಿತಿನ ಕಾರ್ಯಗಳು ನೆರವೇರಲು ಪ್ರಾರ್ಥಿಸಿರಿ. ಪಾರ್ಲಿಮೆಂಟ್ ಮತ್ತು ರಾಜ್ಯ ಮಟ್ಟದಲ್ಲಿರುವ ಜನಪ್ರತಿನಿಧಿಗಳಿಗಾಗಿ **ಪ್ರಾರ್ಥಿಸಿರಿ.**





3. ಅಧಿಕಾರಿಗಳಿಗಾಗಿ ಪ್ರಾರ್ಥಿಸಿರಿ: ಮೂರು ವಿಧವಾದ ಸೇನಾಪಡೆಗಳಿಗಾಗಿ ಪ್ರಾರ್ಥಿಸಿ, ಸೈನ್ಯದ ಅಧಿಕಾರಿಗಳಿಗಾಗಿ, ಕೇಂದ್ರ ಸರ್ಕಾರದ ವಿವಿಧ ಕ್ಷೇತ್ರಗಳಲ್ಲಿರುವ ಎಲ್ಲಾ ಅಧಿಕಾರಿಗಳಿಗಾಗಿ, ರಾಜ್ಯ ಮಟ್ಟದ ವಿವಿಧ ಕ್ಷೇತ್ರಗಳಲ್ಲಿರುವ ಎಲ್ಲಾ ಅಧಿಕಾರಿಗಳಿಗಾಗಿ, ಜಿಲ್ಲಾ ಮಟ್ಟದ ಅಧಿಕಾರಿಗಳಿಗಾಗಿ, ತಹಸಿಲ್ದಾರರಾಗಿ, ಮತ್ತು ದೇಶದಲದಲ್ಲಿರುವ ಪ್ರತಿಯೊಂದು ಅಧಿಕಾರದಲ್ಲಿರುವ ಅಧಿಕಾರಿಗಳನ್ನು ದೇವರು ಜ್ಞಾನದಿಂದ ತುಂಬಿಸುವಂತೆ **ಪ್ರಾರ್ಥಿಸಿ.**



4. ದೇಶದ ಕಾನೂನಿನ ನಿಯಮ ಪಾಲನೆಯನ್ನು ಕ್ರಮವಾಗಿ ಅನುಸರಿಸಲು ನೀತಿಯನ್ನು ಸ್ಥಾಪಿಸುವ ನ್ಯಾಯಾಧಿಕಾರಿಗಳಿಗಾಗಿ ಹಾಗೂ ಉಚ್ಚ ನ್ಯಾಯಾಲಯಕ್ಕಾಗಿ, ಸರ್ವೋಚ್ಚ ನ್ಯಾಯಾಲಯಕ್ಕಾಗಿ, ಜಿಲ್ಲಾ ಮಟ್ಟದ ನ್ಯಾಯಾಲಯಕ್ಕಾಗಿ,

ಹಾಗೂ ಎಲ್ಲಾ ನ್ಯಾಯಧೀಶರಿಗಾಗಿ ಎಲ್ಲಾ ವಕೀಲರಿಗಾಗಿ, ಕರ್ತನ ಆಳ್ವಿಕೆ ಇವರೆಲ್ಲರ ಮೇಲೆ ಇರುವಂತೆ **ಪ್ರಾರ್ಥಿಸಿರಿ.**

5. ಎಲ್ಲಾ ಐ.ಎ.ಎಸ್ ಅಧಿಕಾರಿಗಳು, ಐ.ಪಿ.ಎಸ್ ಅಧಿಕಾರಿಗಳು, ಪೋಲಿಸ್ ಅಧಿಕಾರಿಗಳು, ಆದಾಯ ತೆರಿಗೆ ಅಧಿಕಾರಿಗಳು, ಆಶೀರ್ವದಿಸಲ್ಪಡಲು, ಸಂರಕ್ಷಿಸಲ್ಪಡಲು, ಅವರು ತಮ್ಮ ಅಧಿಕಾರದಲ್ಲಿ ಸತ್ಯವಂತರಾಗಿರಲು **ಪ್ರಾರ್ಥಿಸಿರಿ.**


6. ಚುನಾವಣಾ ಆಯೋಗಕ್ಕಾಗಿ, ಚುನಾವಣಾ ಅಧಿಕಾರಿಗಳಿಗಾಗಿ, ಸಿ.ಬಿ.ಐ ಹಾಗೂ ಅದರಲ್ಲಿರುವ ಅಧಿಕಾರಿಗಳು ಧೈರ್ಯವಾಗಿ ಕಾರ್ಯ ನಿರ್ವಹಿಸಲು ಅವರು ದೇವರ ಜ್ಞಾನದಿಂದ ತುಂಬಿಸಲ್ಪಡಲು **ಪ್ರಾರ್ಥಿಸಿರಿ.**

7. ಲಂಚ ಹಾಗೂ ಭ್ರಷ್ಟಾಚಾರ ಇಲ್ಲದ ದೇಶವಾಗಿ, ನೀತಿ ನ್ಯಾಯವುಳ್ಳ ದೇಶವಾಗಿ, ಮತ ಪಡೆಯುವುದಕ್ಕಾಗಿ ರಾಜಕಾರಣಿಗಳು ಹಣ ವಿಸ್ತರಣೆ ಮಾಡದಿರುವ ದೇಶವಾಗಿ, ನಮ್ಮ ದೇಶವು ಮಾರ್ಪಡುವಂತೆ, ಪ್ರಯೋಜನವಿಲ್ಲದ ಯೋಜನೆಗಳಿಗಾಗಿ ನಿಧಿ ಬಿಡುಗಡೆ ಮಾಡದಂತೆ, ತೆರಿಗೆ ಹಣವನ್ನು ವೆಚ್ಚವಾಗಿ ಕರ್ಚು ಮಾಡದಂತೆ, ಸ್ವಾರ್ಥವಿಲ್ಲದ ನಾಯಕರು ಹಾಗೂ ಅಧಿಕಾರಿಗಳಿಂದ ದೇಶವು ಆಳ್ವಿಕೆ ಮಾಡಲ್ಪಡಲು **ಪ್ರಾರ್ಥಿಸಿರಿ.**

8. ನಮ್ಮ ಭಾರತ ದೇಶದ ಮಧ್ಯಪಾನದ ಅಂಗಡಿಗಳು, ಮಾರಕ ವಸ್ತುಗಳು ಇಲ್ಲದ ದೇಶವಾಗಿ, ರೋಗಗಳು ಇಲ್ಲದ ಆರೋಗ್ಯಕರವಾದ ದೇಶವಾಗಿ ಇರುವಂತೆ ಆಶೀರ್ವದಿಸಿ **ಪ್ರಾರ್ಥಿಸಿ.**


9. ದೇಶದಲ್ಲಿ ಉದ್ಯೋಗ ಅವಕಾಶಗಳು ಅಧಿಕವಾಗಲಿ, ಪದವಿದರರಾಗಿರುವ ಯುವಕರಿಗೆ ಉದ್ಯೋಗಳು ಸಿಗಲು, ದೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಆದಾಯ ಬರಲು, ಹಸಿವು, ಬಡತನ, ಸಾಲದ ನೊಗಗಳು ಇಲ್ಲದೆ, ಜನರೆಲ್ಲರು ಸಮಾಧಾನವಾಗಿ ಬದುಕಲು **ಪ್ರಾರ್ಥಿಸಿರಿ.**

10. ವ್ಯಾಪಾರ ವಹಿವಾಟುಗಳು ಅಧಿಕಾವಾಗುವಂತೆ, ಕಾರ್ಖಾನೆಗಳು ಆಶೀರ್ವದಿಸಲ್ಪಡಲು, ನಮ್ಮ ದೇಶದ ಆಮದು-ರಫ್ತು ಅಭಿವೃದ್ಧಿಯಾಗಲು, ವಿಜ್ಞಾನ ಕ್ಷೇತ್ರದಲ್ಲೂ, ಕ್ರೀಡಾ ಕ್ಷೇತ್ರದಲ್ಲೂ ಅಭಿವೃದ್ಧಿಯಾಗಲು, ದೇಶದಲ್ಲಿರುವ ವಿವಿಧ ಎಲ್ಲಾ ಕ್ಷೇತ್ರಗಳಲ್ಲೂ ಇನ್ನೂ ಅನೇಕ ಸಾಧನೆಗಳು ಅಧಿಕವಾಗಲು ದೇಶವು ಆಶೀರ್ವಾದವಾಗಿರಲೂ **ಪ್ರಾರ್ಥನೆ.**



# ಇಸ್ರಾಯೇಲ್ ದೇಶಕ್ಕಾಗಿ ಪ್ರಾರ್ಥಿಸಿ

**ಒಟ್ಟು ಜನ ಸಂಖ್ಯೆ** : 90.62 ಲಕ್ಷ
**ಯೆಹೂದ್ಯರು** : 71.21 ಲಕ್ಷ
**ಜಿಲ್ಲೆಗಳು** : 7 (ಉತ್ತರ ಜಿಲ್ಲೆ, ಮಧ್ಯೆ ಜಿಲ್ಲೆ, ಹೈಫಾ ಜಿಲ್ಲೆ, ಟೆಲ್ ಅವಿವ್ ಜಿಲ್ಲೆ, ಯೂದಾಯ ಹಾಗೂ ಯೆರುಸಲೇಮ್ ಜಿಲ್ಲೆ, ಸಮಾರ್ಯ ಜಿಲ್ಲೆ,ದಕ್ಷಿಣ ಜಿಲ್ಲೆ).




**1. ಸ್ತೋತ್ರ ಪ್ರಾರ್ಥನೆ!**

ಇಸ್ರಯೇಲ್ ದೇಶದ ಜನರನ್ನು ಕರ್ತನು ತಮ್ಮ ಸ್ವಕೀಯಾ ಜನಾಂಗವಾಗಿ ಆಯ್ಕೆ ಮಾಡಿಕೊಂಡದರಿಂದ, ಇವರ ಮಧ್ಯದಲ್ಲಿ ಕರ್ತನಾದ ಯೇಸು ಕ್ರಿಸ್ತನು ಲೋಕರಕ್ಷಕನಾಗಿ ಅವತರಿಸಿ, ಈ ದೇಶದಲ್ಲಿ ಒಳ್ಳೆಯದನ್ನು ಮಾಡುವ ಸಲುವಾಗಿ ತಿರುಗಾಡಿದರಿಂದ, ರಕ್ತ ಸುರಿಸಿ, ಸತ್ತು ಸಮಾಧಿ ಮಾಡಲ್ಪಟ್ಟು, ಪುನರುತ್ಥಾನರಾದ್ದರಿಂದ, ಈ ದೇಶದಲ್ಲಿ ಪರಿಶುದ್ಧ ಆತ್ಮನು ಮೊಟ್ಟ ಮೊದಲಾಗಿ ಸುರಿಸಲ್ಪಟ್ಟದ್ದಕ್ಕಾಗಿ, ಪುನಃ ಆತನ ಪಾದಗಳು ಇಲ್ಲಿರುವ ಒಲಿವ ಬೆಟ್ಟದ ಮೇಲೆ ನಿಲ್ಲುವುದರಿಂದ ಪ್ರಪಂಚ ವ್ಯಾಪಿಸುವ ಉಜ್ಜೀವನಕ್ಕೆ, ಇಸ್ರಾಯೇಲ್ ದೇಶವನ್ನು ಒಂದು ಅಸ್ತಿವಾರವಾಗಿ ಕರ್ತನು ಇಟ್ಟಿರುವುದರಿಂದ ಆತನನ್ನು **ಸ್ತುತಿಸಿರಿ.**

**2. ಹೋರಾಟದ ಪ್ರಾರ್ಥನೆ!**

ಇಸ್ರಾಯೇಲ್ ದೇಶದ ರಕ್ಷಣೆಗಾಗಿ, ಉಜ್ಜೀವನಕ್ಕೆ ವಿರುದ್ಧವಾಗಿಯು ಕ್ರಿಯೆ ಮಾಡುವ ಸೈತಾನನ ಕ್ರಿಯೆಗಳನ್ನು, ವಾಯು ಮಂಡಲದಲ್ಲಿರುವ ದುರಾತ್ಮ ಸೈನ್ಯಗಳು, ಈ ಪ್ರಪಂಚದ ಆತ್ಮಗಳನ್ನು, ಪಾತಾಳದಿಂದ ಏರಿ ಬರುವ ದುರಾತ್ಮಗಳು ಕಟ್ಟಲ್ಪಡಲು ಪ್ರಾರ್ಥಿಸಿರಿ. ಕಾನಾನಿನ ದುರಾತ್ಮಗಳ ಕ್ರಿಯೆಗಳು ನಿರ್ಮೂಲವಾಗುವಂತೆ **ಪ್ರಾರ್ಥಿಸಿ.**

**3. ಉಜ್ಜೀವನಕ್ಕಾಗಿ ಪ್ರಾರ್ಥನೆ!**

* ಆದಿ ಅಪೋಸ್ತಲರ ಕಾಲದಲ್ಲಿ ನಡೆದಂತಹ, ಈ ದೇಶದಲ್ಲಿ ಪುನಃ ಒಂದು ಉಜ್ಜೀವನ ಬೆಂಕಿಯು ಹಾಕಲ್ಪಡುವುದಕ್ಕಾಗಿ, ಅಲ್ಲಿರುವ ಸಭೆಗಳ ಮೇಲೂ, ಪಂಚಶತ್ತಮದ ಅಗ್ನಿಯ ಅನುಭವ ಪುನಃ ಬರುವಂತೆ, ಅಲ್ಲಿರುವ ದೇವ ಸೇವಕರು ಉಜ್ಜೀವನ ದರ್ಶನ ಹೊಂದಲು, ವಿಶ್ವಾಸಿಗಳು ಪ್ರಾರ್ಥಿಸುವಂತೆ ಮಾರ್ಪಡಲು **ಭಾರದಿಂದ ಪ್ರಾರ್ಥಿಸಿ.**

* ಆ ದೇಶದಲ್ಲಿರುವ ಸಭೆಗಳೊಳಗೆ ಕಳ್ಳ ಉಪದೇಶಗಳು, ಕಳ್ಳ ಆರಾಧನೆಗಳು, ಪೋಲಿಯಾದ ಉಜ್ಜೀವನ ನುಸಳದಂತೆ, ಕರ್ತನು ರಕ್ಷಿಸುವಂತೆ **ಪ್ರಾರ್ಥಿಸಿ.**

**4. ಬಿನ್ನಹಿಸುವ ಪ್ರಾರ್ಥನೆ!**

'ಇಸ್ರಾಯೇಲ್ಯರೆಲ್ಲರು ರಕ್ಷಣೆ ಹೊಂದುವರು'. (ರೋಮ 11:36) ಎನ್ನುವಂತೆ ಕರ್ತನ ವಾಗ್ದಾನ ನೆರವೇರುವಂತೆ, ಚಿಕ್ಕ ಮಕ್ಕಳು, ಯುವಕರು, ಹಿರಿಯರು, ಮತವಾದಿಗಳು ಮಾನಸಾಂತರ ಹೊಂದಿ ರಕ್ಷಣೆ ಹೊಂದಲು, ಅವರಲ್ಲಿರುವ ಬೇಡವಾದ ಹೆಮ್ಮೆಗಳು, ಪುನಃ ಪಾರಂಪರ್ಯಗಳು ಮತ್ತು ನಡೆಸಿಕೊಂಡು ಬರುತ್ತಿರುವ ಪುರಾತನ ಕ್ರಿಯೆಗಳಿಂದ ಅವರು ಬಿಡುಗಡೆ ಹೊಂದಿ, ಕರ್ತನಾಗಿರುವ ಯೇಸು ಕ್ರಿಸ್ತನೇ 'ಮೆಸ್ಸಿಯ' ಎಂದು ಅಂಗೀಕರಿಸುವಂತೆ **ಪ್ರಾರ್ಥಿಸಿರಿ.**

**5. ರಕ್ಷಣೆಯ ಪ್ರಾರ್ಥನೆ!**

ಇಸ್ರಾಯೇಲ್ ದೇಶವನ್ನು ನಾಶಮಾಡುವ ಸಲುವಾಗಿ ಆ ದೇಶದ ಸುತ್ತಲಿರುವ ಸುಮಾರು 24 ದೇಶಗಳು ಕಂಕಣ ಕಟ್ಟಿಕೊಂಡು ಕ್ರಿಯೆ ಮಾಡುತ್ತಿವೆ. ಆ ದೇಶಗಳ ಕುತಂತ್ರಗಳು ಲಯವಾಗುವಂತೆ, ಆ ದೇಶಗಳ ನಾಯಕರನ್ನು ಹಾಗೂ ಸೈನ್ಯವನ್ನು ಬಲಪಡಿಸುವ ವಾಯು ಮಂಡಲದ ದುರಾತ್ಮಗಳು ಕಟ್ಟಲ್ಪಡುವಂತೆ, ಆ ದೇಶದಲ್ಲಿಯೇ ಇದ್ದುಕೊಂಡು ಕ್ರಿಯೆ ಮಾಡುವ ಉಗ್ರಗಾಮಿಗಳ ಕಾರ್ಯಚರಣೆಗಳು ಲಯವಾಗುವಂತೆ **ಪ್ರಾರ್ಥಿಸಿ.**

**6. ಆಶೀರ್ವಾದದ ಪ್ರಾರ್ಥನೆ!**


ಇಸ್ರಾಯೇಲ್ ದೇಶವನ್ನು ಆಶೀರ್ವದಿಸುವುದೇ ದೇವರಿಗೆ ಪ್ರಿಯವಾಗಿದೆ ಎಂದು ಕರ್ತನು ಹೇಳಿರುವ ಪ್ರಕಾರ, ಈ ದೇಶದ ಆರ್ಥಿಕತೆ, ವ್ಯವಸಾಯ ಪ್ರದೇಶಗಳು, ಜಲಚರಗಳು ಆಶೀರ್ವದಿಸಲ್ಪಡಲು, ಪರ್ವತ ಪ್ರದೇಶಗಳಲ್ಲಿ, ಮರುಭೂಮಿಯಲ್ಲಿ ಮರೆಯಾಗಿರುವ ಆಶೀರ್ವಾದಗಳು ಹೊರಬರಲು, ಚದುರಿಸಲ್ಪಟ್ಟಿರುವ ದೇಶಗಳಿಂದ ಹಿಂದಿರುಗುವ ಯೆಹೂದ್ಯರ ಜೀವನಾಧಾರಗಳು ಆಶೀರ್ವದಿಸಲ್ಪಡಲು **ಪ್ರಾರ್ಥಿಸೋಣ.**

**7.ದೇಶವನ್ನು ಆಳುವವರಿಗಾಗಿ ಪ್ರಾರ್ಥನೆ!**

ಈ ದೇಶವನ್ನು ಆಳುವವರ ಮೇಲೆ ಕರ್ತನ ಆಳ್ವಿಕೆ, ದೈವ ಜ್ಞಾನ ಪ್ರಕಟವಾಗಲು ಪ್ರಾರ್ಥಿಸಿ, ಒಳಿತಿನ ಯೋಜನೆಗಳು, ಉಜ್ಜೀವನಕ್ಕೆ ಆಧಾರವಾಗಿರುವ ಯೋಜನೆಗಳನ್ನು ಅಸ್ತಿತ್ವಕ್ಕೆ ತರಲು ಪ್ರಾರ್ಥಿಸಿ, ಸಲಿಂಗಕಾಮವನ್ನು ಆಚರಿಸುವ ಕಾರ್ಯಗಳು, ವ್ಯಭಿಚಾರ, ಕುಡುಕತನ ಇಂತಹ ದುಷ್ಟ ಕಾರ್ಯಗಳನ್ನು ತಡೆಗಟ್ಟುವ ಕಾನೂನು ತರುವಂತೆ **ಪ್ರಾರ್ಥಿಸಿ.**

# ಭಾರತ

| | |
|---|---|
| ಜನ ಸಂಖ್ಯೆ | : ಸುಮಾರು 138 ಕೋಟಿ |
| ಹಿಂದು | : 80 ಕೋಟಿ |
| ಮುಸ್ಲಿಮ್ | : 13 ಕೋಟಿ |
| ಕ್ರಿಶ್ಚಿಯನ್ | : 2.5 ಕೋಟಿ |
| ಭಾಷೆ | : 1652 |
| ರಾಜ್ಯಗಳು | : 28 |
| ಯೂನಿಯನ್ ಪ್ರದೇಶಗಳು | : 9 |




**ಭಾರತ ದೇಶಕ್ಕೆ ಸಂಭದ ಪಟ್ಟ ಕೆಲವು ಮಾಹಿತಿಗಳು**

* ಸುಮಾರು 2 ಲಕ್ಷ ಗ್ರಾಮಗಳಿಗಿಂತ ಹೆಚ್ಚಾದ ಗ್ರಾಮಗಳಲ್ಲಿ ರಸ್ತೆಗಳ ಸೌಲಭ್ಯಗಳಿಲ್ಲಾ!
* ಸುಮಾರು 1 ಕೋಟಿಯಷ್ಟು ಮಕ್ಕಳು ಕೂಲಿ ಕಾರ್ಮಿಕರಾಗಿ ಇದ್ದಾರೆ.
* 6.2 ಕೋಟಿಯಷ್ಟು ಜನರು ಗುಡಿಸಲುಗಳಲ್ಲಿ ವಾಸಿಸುವವರಾಗಿ ಇದ್ದಾರೆ.
* ಸುಮಾರು 20 ಕೋಟಿಯಷ್ಟು ಜನರಿಗೆ ಒಂದು ಹೊತ್ತು ಊಟಕ್ಕೂ ಕಷ್ಟಪಡುತ್ತಿದ್ದಾರೆ.
* ಸುಮಾರು 20 ಕೋಟಿಯಷ್ಟು ಜನರಿಗೆ ರಾತ್ರಿಯ ಊಟವು ಸಿಗುತ್ತಿಲ್ಲ.
* ಸುಮಾರು 42 ಕೋಟಿಗಿಂತ ಅಧಿಕ ಜನರು ದಿನ ಕೂಲಿ ಕೆಲಸ ಮಾಡುವವರಾಗಿದ್ದಾರೆ.
* ಪ್ರಪಂಚದಲ್ಲೇ ಅಧಿಕವಾಗಿ ಬಲತ್ಕಾರಕ್ಕೆ ಗುರಿಯಾಗುವ ಮಕ್ಕಳು ಭಾರತದಲ್ಲಿಯೇ ಅಧಿಕವಾಗಿದ್ದಾರೆ.
* ಒಂದೊಂದು ದಿನವು ಸರಾಸರಿಯಾಗಿ 1374 ವಿಪತ್ತುಗಳು ಸಂಭವಿಸುತ್ತದೆ. ಇದರಲ್ಲಿ ಸುಮಾರು 400 ಮಂದಿ ಸಾವಿಗೀಡಾಗುತ್ತಿದ್ದಾರೆ.
* ಪ್ರತಿ ವರ್ಷವು ಸುಮಾರು 29 ಲಕ್ಷ ಜನರು ಕ್ಯಾನ್ಸರ್ ರೋಗಕ್ಕೆ ಚಿಕಿತ್ಸೆ ಪಡೆಯುತ್ತಿದ್ದಾರೆ.

# ಭಾರತ ದೇಶದ ರಾಜ್ಯಗಳು

| ಕ್ರ.ಸಂ | ರಾಜ್ಯಗಳು | ಜನಸಂಖ್ಯೆ (ಸರಾಸರಿ) | ಕ್ರೈಸ್ತರು | ಜಿಲ್ಲೆಗಳು | ಗ್ರಾಮಗಳು |
|---|---|---|---|---|---|
| 1 | ಕರ್ನಾಟಕ | 6.8 ಕೋಟಿ | 1.87% | 30 | 29,736 |
| 2 | ತಮಿಳುನಾಡು | 8 ಕೋಟಿ | 6.12% | 38 | 17,680 |
| 3 | ಕೇರಳ | 4 ಕೋಟಿ | 17% | 14 | 1,553 |
| 4 | ಆಂಧ್ರ ಪ್ರದೇಶ | 5.3 ಕೋಟಿ | 1.3% | 31 | 17,286 |
| 5 | ತೆಲಂಗಾಣ | 4 ಕೋಟಿ | 1.37% | 31 | 12,751 |
| 6 | ಗೋವಾ | 34 ಲಕ್ಷ | 26% | 2 | 411 |
| 7 | ಮಹಾರಾಷ್ಟ್ರ | 12.10 ಕೋಟಿ | 1% | 36 | 43,665 |
| 8 | ಚತ್ತಿಸ್‌ಗರ್ | 2.90 ಕೋಟಿ | 1% | 27 | 20,126 |
| 9 | ಒರಿಸ್ಸಾ | 4.6 ಕೋಟಿ | 2.77% | 30 | 51,583 |
| 10 | ಜಾರ್ಖಂಡ್ | 3.7 ಕೋಟಿ | 0.72% | 23 | 32,945 |
| 11 | ಬಿಹಾರ | 11 ಕೋಟಿ | 1.1% | 40 | 26,247 |
| 12 | ಪಶ್ಚಿಮ ಬಂಗಾಳ | 9.5 ಕೋಟಿ | 0.72% | 23 | 853 |
| 13 | ಅಸ್ಸಾಂ | 3.5 ಕೋಟಿ | 3.70% | 33 | 1,178 |
| 14 | ಮೇಘಾಲಯ | 35 ಲಕ್ಷ | 74.59% | 11 | 853 |
| 15 | ತ್ರಿಪುರ | 45 ಲಕ್ಷ | 4.45% | 8 | 1,178 |
| 16 | ಮಿಜೋರಾಂ | 11 ಲಕ್ಷ | 87.16% | 8 | 853 |
| 17 | ಮಣಿಪುರ | 32 ಲಕ್ಷ | 41.29% | 16 | 2,639 |
| 18 | ನಾಗಲ್ಯಾಂಡ್ | 23 ಲಕ್ಷ | 88.1% | 12 | 1,238 |
| 19 | ಅರುಣಾಚಲ ಪ್ರದೇಶ | 16 ಲಕ್ಷ | 30.26% | 25 | 5,536 |
| 20 | ಸಿಕ್ಕಿಂ | 6.60 ಲಕ್ಷ | 9.9% | 4 | 441 |
| 21 | ಉತ್ತರ ಪ್ರದೇಶ | 21.75 ಕೋಟಿ | 0.1% | 75 | 1,10,453 |
| 22 | ಮಧ್ಯ ಪ್ರದೇಶ | 7.3 ಕೋಟಿ | 0.3% | 51 | 55,429 |
| 23 | ಗುಜರಾತ್ | 6.1 ಕೋಟಿ | 0.52% | 33 | 18,676 |
| 24 | ರಾಜಸ್ಥಾನ | 7.3 ಕೋಟಿ | 0.13% | 33 | 44,981 |
| 25 | ಪಂಜಾಬ್ | 3 ಕೋಟಿ | 1.26% | 22 | 12,858 |

# ಕೇಂದ್ರಾಡಳಿತ ಪ್ರದೇಶ

| | | | | |
|---|---|---|---|---|
| 1. ದಿಲ್ಲಿ | 2 ಕೋಟಿ | 0.92% | 11 | 225 |
| 2. ಚಂಡೀಗರ್ | 11 ಲಕ್ಷ | 1% | 1 | 13 |
| 3. ಪುದುಚೇರಿ | 13 ಲಕ್ಷ | 9% | 4 | 101 |
| 4. ಅಂಡಾಮನ್ ಮತ್ತು ನಿಕೋಬರ್ ದ್ವೀಪಗಳು | 4 ಲಕ್ಷ | 26% | 3 | 560 |
| 5. ಲಕ್ಷದ್ವೀಪ | 75 ಸಾವಿರ | 1% | 1 | 27 |
| 6. ಡಾಮನ್ ಮತ್ತು ಡ್ಯು | 2.75 ಲಕ್ಷ | 3% | 2 | 27 |
| 7. ಡಾಡ್ರ ಮತ್ತು ನಗರ | 3.50 ಲಕ್ಷ | 3% | 1 | 71 |
| 8. ಜಮ್ಮು ಮತ್ತು ಕಾಶ್ಮೀರ | 1.38 ಲಕ್ಷ | 0.3% | 22 | 7,905 |
| 9. ಲಡಕ | 3 ಲಕ್ಷ | | | |

# ಕರ್ನಾಟಕ




**ರಾಜದಾನಿ:** ಬೆಂಗಳೂರು
**ಜನಸಂಖ್ಯೆ:** 6.8 ಕೋಟಿ
**ಕ್ರೈಸ್ತರು:** 1.87%
**ಮುಸ್ಲಿಮ್:** 12.92%
**ಹಿಂದು:** 84%
**ಜಿಲ್ಲೆಗಳು:** 30
**ಗ್ರಾಮಗಳು:** 29,736
**ತಾಲೂಕುಗಳು:** 176
**ಅಕ್ಷರಸ್ತರು:** 75.36%
**ಮಾತನಾಡುವ ಭಾಷೆ:** ಕನ್ನಡ
**ಲೋಕಸಭಾ ಕ್ಷೇತ್ರಗಳು:** 28
**ವಿಧಾನಸಭಾ ಕ್ಷೇತ್ರಗಳು:** 224

# ಕರ್ನಾಟಕದ ಜಿಲ್ಲೆಗಳು

| ಕ್ರ.ಸಂ | ಜಿಲ್ಲೆಗಳು | ಜನಸಂಖ್ಯೆ (ಸರಾಸರಿ) | ಕ್ರೈಸ್ತರು | ತಾಲ್ಲೂಕುಗಳು | ಗ್ರಾಮಗಳು |
|---|---|---|---|---|---|
| 1 | ಬಾಗಲಕೋಟೆ | 18,89752 | 0.18% | 6 | 638 |
| 2 | ಬೆಂಗಳೂರು | 96,21,551 | 5.25% | 4 | 612 |
| 3 | ಬೆಂಗಳೂರು ಗ್ರಾಮಂತರ | 9,90,923 | 0.54% | 4 | 1059 |
| 4 | ಬೆಳಗಾವಿ | 47,79,661 | 0.39% | 10 | 1306 |
| 5 | ಬಳ್ಳಾರಿ | 54,52,595 | 0.57% | 7 | 565 |
| 6 | ಬೀದರ | 17,03,300 | 2.25% | 5 | 629 |
| 7 | ಬಿಜಾಪುರ | 21,77,331 | 0.11% | 5 | 698 |
| 8 | ಚಾಮರಾಜನಗರ | 10,20,791 | 2.17% | 4 | 514 |
| 9 | ಚಿಕ್ಕ ಬಳ್ಳಾಪುರ | 12,55,104 | 0.37% | 6 | 1521 |
| 10 | ಚಿಕ್ಕ ಮಗಳೂರು | 11,37,961 | 2.28% | 7 | 1126 |
| 11 | ಚಿತ್ರದುರ್ಗ | 16,59,456 | 0.19% | 6 | 1071 |
| 12 | ದಕ್ಷಿಣ ಕನ್ನಡ | 20,89,649 | 8.20% | 5 | 376 |
| 13 | ದಾವಣಗೆರೆ | 19,45,497 | 0.28% | 6 | 932 |
| 14 | ಧಾರವಾಡ | 18,47,023 | 1.56% | 5 | 384 |
| 15 | ಗದಗ | 10,64,570 | 0.32% | 5 | 346 |
| 16 | ಗುಲ್ಬರ್ಗಾ | 25,66,326 | 0.33% | 7 | 932 |
| 17 | ಹಾಸನ | 17,76,421 | 0.18% | 8 | 2593 |
| 18 | ಹಾವೇರಿ | 15,97,668 | 0.15% | 7 | 713 |
| 19 | ಕೊಡಗು | 5,54,519 | 3.09% | 3 | 301 |
| 20 | ಕೋಲಾರ | 15,36,401 | 1.74% | 5 | 1809 |
| 21 | ಕೊಪ್ಪಳ | 13,89,920 | 0.29% | 4 | 635 |
| 22 | ಮಂಡ್ಯ | 18,05,769 | 0.47% | 7 | 1486 |
| 23 | ಮೈಸೂರು | 30,01,127 | 1.31% | 7 | 1362 |
| 24 | ರಾಯಚೂರು | 19,28,812 | 0.54% | 5 | 893 |
| 25 | ರಾಮನಗರ | 10,82,636 | 0.59% | 4 | 878 |
| 26 | ಶಿವಮೊಗ್ಗ | 17,52,753 | 1.51% | 7 | 1539 |
| 27 | ತುಮಕೂರು | 26,78,980 | 0.34% | 10 | 2727 |
| 28 | ಉಡುಪಿ | 11,77,361 | 5.59% | 3 | 259 |
| 29 | ಉತ್ತರ ಕನ್ನಡ | 14,37,169 | 3.10% | 11 | 1312 |
| 30 | ಯಾದಗಿರಿ | 11,74,271 | 0.74% | 3 | 520 |

As per the census of 2011




Jesus Redeems MINISTRIES

*Nalumavadi - 628 211, Thoothukudi Dt., T.N., India.*

**+91- 4639 22 00 22 | +91 - 81110 71000**

*For More Details:*

**+91 - 7795773773**

**prayer@jesusredeems.org**

**www..jesusredeems.org**

*Watch our programs:*

**jesusredeemskannada**

**comfortertv.com**

**mohanclazarus / podcast**